# ೧೩ನೇ ಭಾಗ.

## ತಾಲೂಕುಗಳು.

# ಧಾರವಾಡ ಜಿಲ್ಲೆ.

**ಕ್ಷೇತ್ರ.**

ಬಂಕಾಪುರ ತಾಲೂಕು.—ಜಿಲ್ಲೆಯ ಪಶ್ಚಿಮ ಭಾಗದ ಮಧ್ಯ ದೇಶದಲ್ಲಿ ಹುಬ್ಬಳ್ಳೀ ತಾಲೂಕಿನ ದಕ್ಷಿಣಕ್ಕೆ ಇರುತ್ತದೆ. ಇದರಲ್ಲಿ ೧೫೫ ಸರಕಾರೀ ಗ್ರಾಮಗಳೂ ೧೬ ದುಮಾಲೀ ಗ್ರಾಮಗಳೂ ಉಂಟು. ಇದರ ಕ್ಷೇತ್ರಫಲ ೩೪೩ ಚಚ್ಚೌಕು ಮೈಲು, ಜನಸಂಖ್ಯೆ ೭೬೫೫. ಭೂಮಿಯ ಕಂದಾಯ ೧೯೮೭೫೦ ರೂಪಾಯಿ.

**ಸ್ವರೂಪ.**

ಪಶ್ಚಿಮ ಭಾಗದಲ್ಲಿ ಗುಡ್ಡಗಳೂ ಅಡವಿಯೂ ಉಂಟು. ಅಲ್ಲಿ ಬಡ ವೊಕ್ಕಲಿಗರ ಸಣ್ಣ ಸಣ್ಣ ಹಳ್ಳಿಗಳು ವೊಂದಕ್ಕೊಂದು ಸಮೀಪವಾಗಿರುತ್ತವೆ. ಮಧ್ಯ ಭಾಗದಲ್ಲಿ ಸಮನೆಲದ ಭೂಮಿಯುಂಟು, ಉತ್ತರ ಪೂರ್ವ ಭಾಗಗಳಲ್ಲಿ ಅಲ್ಲಲ್ಲಿಗೆ ಸಸಿ ಇಲ್ಲದಂಥ ದಿನ್ನೆಗಳಿವೆ. ಈ ಪ್ರದೇಶಗಳಲ್ಲಿ ದೈವುಳ್ಳ ವೊಕ್ಕಲಿಗರ ದೊಡ್ಡ ದೊಡ್ಡ ಗ್ರಾಮಗಳು ದೂರ ದೂರ ಇರುತ್ತವೆ.

**ಭೂಮಿ.**

ಭೂಮಿಯು ಪಶ್ಚಿಮದಲ್ಲಿ ಮುಖ್ಯವಾಗಿ ಕೆಂಪು, ಉತ್ತರ ದಕ್ಷಿಣಗಳಲ್ಲಿ ಮುಖ್ಯವಾಗಿ ಯೆರೆ, ಪೂರ್ವದಲ್ಲಿ ಯೆರೆ ಕೆಂಪು ಮಿಶ್ರ. ಈ ಭೂಮಿಯು ಉತ್ತರದಿಂದ ಪಶ್ಚಿಮಕ್ಕೆ ಇಳಕಲಾಗಿರುತ್ತದೆ.

**ಮಳೆ, ಹವೆ, ನೀರು.**

ಶಿಗ್ಗಾವಿಯ ನೆರೆ ಪ್ರದೇಶ ಹೊರ್ತಾಗಿ ಈ ತಾಲೂಕಿನ ಹವೆಯು ಆರೋಗ್ಯದ್ದಿರುತ್ತದೆ; ಮಳೆಯು ಸೇಮದ ಮಾನದ್ದಾಗುತ್ತದೆ, ೧೫ರಿಂದ ೩೮ ಇಂಚಿನ ವರೆಗೆ; ಸರಾಸರಿ ೨೫ ಇಂಚು. ದಕ್ಷಿಣ ಮೇರೆಯಲ್ಲಿ ವರದಾ ನದಿಯೂ ಅದಕ್ಕೆ ಕೂಡುವದೊಂದು ಹಳ್ಳವೂ ಆ ಪ್ರದೇಶದ ಜನರಿಗೆ ಮುಖ್ಯ ನೀರಿನ ಆಸರವು; ಉಳಿದ ಕಡೆಯಲ್ಲೆಲ್ಲ ಸಣ್ಣ ದೊಡ್ಡ ಶೀ ನೀರಿನ ಕೆರೆಗಳ ಆಸರವು. ದೊಡ್ಡ ಕೆರೆಗಳ ನೀರು ತಕ್ಕಮಟ್ಟಿಗೆ ನಿರ್ಮಲವಿರುತ್ತದೆ.

**ಜನರು.**

ಸನ್ ೧೮೮೧ರ ಖಾನೇಸುಮಾರಿಯಂತೆ ವೊಟ್ಟು ಜನಸಂಖ್ಯದಲ್ಲಿ ಶೇಕಡಾ ೮೫·೩೧ ಹಿಂದೂ ಜನರು, ೧೪·೬೭ ಮುಸಲ್ಮಾನರು, ೭ ಕ್ರಿಸ್ತಿಯನ್ನರು ಈ ತಾಲೂಕಿನಲ್ಲಿ ಇದ್ದರು. ಹಿಂದೂ ಜನರಲ್ಲಿ ಬ್ರಾಹ್ಮಣರು ೨೭೬೯೨, ಕುರುಬರು ೬೦೯೮, ಆರೇರು ೫೩೭೪, ಬೇಡರು ೪೨೧೦, ಗಾಣಿಗರು ೨೬೫೫, ಲಿಂಗವಂತರು ೧೬೭೪, ಪಂಚಾಳರು ೧೬೪೨, ಅಂಬಿಗರು ೧೧೨೪, ವೊಡ್ಡರು ೧೧೧೮ ಇತ್ಯಾದಿ.

**ಧಾರವಾಡ ತಾಲೂಕು.**—ಜಿಲ್ಲೆಯ ವಾಯುವ್ಯ ಮೂಲೆಯಲ್ಲಿ ಬೆಳಗಾವೀ ಜಿಲ್ಲೆಯ ದಕ್ಷಿಣಕ್ಕಿರುತ್ತದೆ. ಇದರಲ್ಲಿ ಸರಕಾರೀ ಗ್ರಾಮುಗಳು ೧೭೯, ದುಮಾಲೀ ೩೪. ಕ್ಷೇತ್ರಫಲ ೪೨೫ ಚ. ಮೈಲು, ಜನಸಂಖ್ಯ ೧೧೧೧೩೭. ಭೂಮಿಯ ಕಂದಾಯ ೨೭೭೦೫೦ ರೂಪಾಯಿ.

**ಕ್ಷೇತ್ರ.**

**ಸ್ವರೂಪ.** ಪಶ್ಚಿಮ ದಕ್ಷಿಣಗಳಲ್ಲಿ ಗುಡ್ಡಗಾಡು ನೆಲ, ಅದರಲ್ಲಿ ಅಡವಿ ಹಬ್ಬಿರುವದು; ಉತ್ತರ ಪೂರ್ವಗಳಲ್ಲಿ ತಕ್ಕಮಟ್ಟಿಗೆ ಸವನಾದ ಯೆರೆ ಭೂಮಿ, ಅದರಲ್ಲಿ ಮಾವು, ಜಾಲಿಗಳ ಹೊರ್ತು ವೃಕ್ಷಗಳಿಲ್ಲ.

**ಭೂಮಿ.** ಕೆಲವು ಕಣಿವೆಗಳಲ್ಲಿಯೂ ಕೊಳ್ಳಗಳಲ್ಲಿಯೂ ಮಾತ್ರ ಕೆಂಪು ಭೂಮಿಯನ್ನು ಕಾಣಬಹುದು; ಉಳಿದದ್ದೆಲ್ಲ ಯೆರೆ ಭೂಮಿ.

**ಹವೆ, ಮಳೆ, ನೀರು.** ಪಶ್ಚಿಮ ಭಾಗದಲ್ಲಿ ಹವೆ ತಂಪು ಜ್ವರಕಾರಕ, ಪೂರ್ವ ಭಾಗದಲ್ಲಿ ಆರೋಗ್ಯದ್ದು. ಧಾರವಾಡದಲ್ಲಿ ಮಳೆ ಸರಾಸರೀ ೩೨ ಇಂಚು. ಆದರೆ ಪಶ್ಚಿಮ ಭಾಗದಲ್ಲಿ ಬೀಳುವಷ್ಟು ಮಳೆ ಪೂರ್ವ ಭಾಗದಲ್ಲಿ ಬೀಳುವದಿಲ್ಲ. ತುಪ್ರೀ ಹಳ್ಳದ ಹೊರ್ತು ಸರುವುಗಳಿಲ್ಲ; ಯೆಲ್ಲ ಕಡೆಯಲ್ಲಿ ಕೆರೆಗಳ ನೀರೇ ಮುಖ್ಯ ಆಸರ; ಕೆಲವು ಕಡೆಯಲ್ಲಿ ಸೇದುವ ಬಾವಿಗಳುಂಟು. ಆದರೆ ಬಹಳ ಕಡೆಯಲ್ಲಿ ಕೆರೆಗಳಲ್ಲಿಯೂ ಬಾವಿಗಳಲ್ಲಿಯೂ ನೀರು ಸ್ವಲ್ಪ ಸೌಳು ಇರುತ್ತದೆ. ಒಟ್ಟಿಗೆ ಈ ತಾಲೂಕಿನಲ್ಲಿ ನೀರಿನ ಕೊರತೆಯುಂಟು.

**ಜನರು.** ಒಟ್ಟು ಜನಸಂಖ್ಯದಲ್ಲಿ ಶೇಕಡಾ ೮೫·೬೧ ಹಿಂದೂ ಜನರು, ೧೩·೫೦ ಮುಸಲ್ಮಾನರು, ೦·೮೩ ಕ್ರಿಸ್ತಿಯನ್ನರು ಉಂಟು. ಹಿಂದೂ ಜನರಲ್ಲಿ ಬ್ರಾಹ್ಮಣರು ೪೫೨೫, ಲಿಂಗವಂತರು ೩೭೬೨೪, ಜೈನರು ೨೬೦೮, ಆರೇರು ೧೨೬೬೮, ನೇಕಾರರು ೨೯೨೨, ಕುರುಬರು ೭೬೪೫, ಬೇಡರು ೫೭೧೪, ಗಾಣಿಗರು ೧೨೮೫ ಇತ್ಯಾದಿ.

**ಗದಗ ತಾಲೂಕು.**—ಜಿಲ್ಲೆಯ ಪೂರ್ವ ಭಾಗದಲ್ಲಿ ರೋಣ ತಾಲೂಕಿನ ದಕ್ಷಿಣಕ್ಕಿರುತ್ತದೆ. ಸರಕಾರೀ ಹಳ್ಳಿಗಳು ೧೧೪, ದುಮಾಲೀ ೧೪. ಕ್ಷೇತ್ರ ೬೯೯ ಚ. ಮೈಲು, ಜನಸಂಖ್ಯ ೧೦೦೩೩೩, ಭೂಮಿಯ ಕಂದಾಯ ೨೫೭೪೦೦ ರೂಪಾಯಿ.

**ಕ್ಷೇತ್ರ.**

**ಸ್ವರೂಪ.** ಗುಡ್ಡಗಾಡು ಭೂಮಿ, ಅಲ್ಲಲ್ಲಿಗೆ ಅಡವಿಯುಂಟು. ಉತ್ತರದಲ್ಲಿ ಅಲ್ಪ ಸ್ವಲ್ಪ ಸವನೆಲ ವುಂಟು. ನೈರುತ್ಯದಲ್ಲಿ ಕಪೋತ ಗುಡ್ಡವು ೩೩ ಮೈಲಿನ ವರೆಗೆ ಹಬ್ಬಿರುತ್ತದೆ; ಪಶ್ಚಿಮದಲ್ಲಿಯೂ ಗುಡ್ಡಗಳಿವೆ. ದಕ್ಷಿಣದಲ್ಲಿ ಹಳ್ಳಿಗಳು ದಟ್ಟಾಗಿರುವವು; ಜನರು ಬಡವರು.

ಮುಂಡರಗಿಯ ಮಹಾಲಿನ ಹವೆಯು ಜ್ವರಕಾರಕ, ಉಳಿದದ್ದೆಲ್ಲ ಮಧ್ಯಮ ಆರೋಗ್ಯವುಳ್ಳದ್ದು. ಗದಗಿನಲ್ಲಿ ಮಳೆ ೧೧ರಿಂದ ೩೯ ಇಂಚಿನ ವರೆಗೆ, ಸರಾಸರಿ ೨೫ ಇಂಚು,

ಈ ತಾಲೂಕಿನ ಮೇರೆಯಲ್ಲಿ ತುಂಗಭದ್ರೆಯೂ ಅದಕ್ಕೆ ಕೂಡುವ ಹಿರೇ ಹಳ್ಳವೂ

**ಹವೆ, ಮಳೆ, ನೀರು.** ಮುಖ್ಯ ಜಲಾಶಯಗಳು — ಬೇರೆ ಕಡೆಯಲ್ಲಿ ಕೆರೆಗಳೂ ಬಾವಿಗಳೂ ಉಂಟು; ಆದರೆ ಅವು ಬೇಸಿಗೆಯಲ್ಲಿ ಬತ್ತುತ್ತವೆ.

ಒಟ್ಟು ಜನ ಸಂಖ್ಯದಲ್ಲಿ ಶೇಕಡಾ ೮೯·೨೫ ಹಿಂದೂ ಜನರು, ೧೦·೨೮ ಮುಸಲ್ಮಾನರು, ೦·೪೬ ಕ್ರಿಸ್ತಿಯನ್ನರು ಉಂಟು. ಹಿಂದೂ ಜನರಲ್ಲಿ ಬ್ರಾಹ್ಮಣರು ೩೪೩೨, ಲಿಂಗ

**ಜನರು.** ವಂತರು ೩೯೩೦೫, ರಡ್ಡೇರು ೫೦೨೮, ಆರೇರು ೨೪೮೧, ಪಂಚಾಳರು ೨೧೮೩, ಗಾಣಿಗರು ೪೦೧೮, ಪಟಕಾರರು ೨೩೪೬, ಖತ್ರಿಗಳು ೧೫೬೮, ಕುರುಬರು ೧೪೫೦೭, ಬೇಡರು ೬೨೭೪, ವೊಡ್ಡರು ೧೬೮೦, ಮಾದಿಗರು ೩೬೮೦, ಹೊಲಿಯರು ೧೪೮೯, ಇತ್ಯಾದಿ.

ಹಾನಗಲ್ಲು ತಾಲೂಕು. — ಜಿಲ್ಲೆಯ ನೈರುತ್ಯ ಮೂಲೆಯಲ್ಲಿ ಬಂಕಾಪುರ

**ಕ್ಷೇತ್ರ.** ತಾಲೂಕಿನ ದಕ್ಷಿಣಕ್ಕೆ ಇರುತ್ತದೆ. ಇದರಲ್ಲಿ ಸರಕಾರೀ ಹಳ್ಳಿಗಳು ೧೭೫, ದುಮಾಲೀ ೩೬. ಕ್ಷೇತ್ರಫಲ ೨೯೮ ಚ. ಮೈಲು, ಜನಸಂಖ್ಯ ೬೫೭೮೭. ಭೂಮಿಯ ಕಂದಾಯ ೧೮೪೪೯೦ ರೂಪಾಯಿ.

ಪಶ್ಚಿಮ ದಕ್ಷಿಣಗಳಲ್ಲಿ ಅಡವಿಯುಂಟು, ಪೂರ್ವ ಭಾಗ ಬೈಲು. ಭೂಮಿ ತಗ್ಗು

**ಸ್ವರೂಪ.** ಮಿಟ್ಟು, ಹಳ್ಳಿಗಳು ದೂರ ದೂರ; ಪೂರ್ವ ಭಾಗ ಯೆರೆ, ಪಶ್ಚಿಮ ದಕ್ಷಿಣಗಳಲ್ಲಿ ಕೆಂಪು, ಉತ್ತರದಲ್ಲಿ ಮಿಶ್ರ. ಅರವತ್ತು ವರ್ಷದ ಹಿಂದೆ ಕಾನಡಾದಿಂದ ಆನೆಗಳು ಇಲ್ಲಿಯ ಅಡವಿಗೆ ಬರುತ್ತಿದ್ದವು.

ಭೂಮಿಯಲ್ಲಿ ಕೆರೆಗಳ ನೀರು ಬಹಳ ಹರಿಯುವ ಕಾರಣ ಚಳಿಗಾಲದಲ್ಲಿ ಜ್ವರೋಪದ್ರವವಾಗುತ್ತದೆ. ಮಳೆ ೨೦ರಿಂದ ೫೪ ಇಂಚಿನ ವರೆಗೆ, ಸರಾಸರೀ ೩೫ ಇಂಚು.

**ಹವೆ, ಮಳೆ, ನೀರು.** ಆಗ್ನೇಯದಲ್ಲಿ ವರದಾ ನದಿಯೂ ಈಶಾನ್ಯದಲ್ಲಿ ಧರ್ಮಾ ನದಿಯೂ ಅಲ್ಲದೆ ಬೇರೆ ಕೆಲವು ಹಳ್ಳಗಳುಂಟು. ಬೇರೆ ಕೆಲವು ಕೆರೆಗಳೂ ಅವುಗಳಿಂದ ತೆಗಿದ ಕಾವಲಿಗಳೂ ಇರುವ ಕಾರಣ ನೀರಿನ ತಾಪತ್ರಯವು ಬಹುತರ ಆಗುವದಿಲ್ಲ.

ಒಟ್ಟು ಜನಸಂಖ್ಯದಲ್ಲಿ ಶೇಕಡಾ ೮೫·೭೫ ಹಿಂದೂ ಜನರು, ೧೪·೧೯ ಮುಸಲ್ಮಾ

**ಜನರು.** ನರು, ೧೨ ಜನ ಕ್ರಿಸ್ತಿಯನ್ನರು. ಹಿಂದೂ ಜನರಲ್ಲಿ ಬ್ರಾಹ್ಮಣರು ೧೯೪೮, ಲಿಂಗವಂತರು ೨೭೩೯೭, ಆರೇರು ೩೨೮೦, ಕುರುಬರು ೨೭೭೮, ಬೇಡರು ೪೧೮೩, ವೊಡ್ಡರು ೨೮೩೧, ಹೊಲಿಯರು ೨೦೧೨ ಇತ್ಯಾದಿ.

ಹುಬ್ಬಳ್ಳೀ ತಾಲೂಕು. — ಜಿಲ್ಲೆಯ ಮಧ್ಯ ಭಾಗದ ಉತ್ತರದಲ್ಲಿ ಧಾರವಾಡ

**ಕ್ಷೇತ್ರಫಲ.** ತಾಲೂಕಿನ ದಕ್ಷಿಣಕ್ಕೆ ಇರುತ್ತದೆ. ಸರಕಾರೀ ಹಳ್ಳಿಗಳು ೮೬, ದುಮಾಲೀ ೮; ಕ್ಷೇತ್ರಫಲ ೩೧೧ ಚ. ಮೈಲು, ಜನಸಂಖ್ಯ ೯೧೯೯೭, ಭೂಮಿಯ ಕಂದಾಯ ೨೬೦೫೬೦ ರೂಪಾಯಿ.

ಸಹ್ಯಾದ್ರಿ ಬೈಲು ಶೀಮೆಗಳ ನಡುವಿನ ಕಿರಿ ನೆಲವು ಈ ತಾಲೂಕಿನೊಳಗಿಂದ ಹಾದು ಹೋಗುತ್ತದೆ. ಆದರ ಪಶ್ಚಿಮದಲ್ಲಿ ಸಣ್ಣ ಗುಡ್ಡಗಳೂ ಸಣ್ಣ ಸಣ್ಣ ಬಡ ಒಕ್ಕಲಿಗರ ಹಳ್ಳಿಗಳೂ ಉಂಟು; ಪೂರ್ವಕ್ಕೆ ವೃಕ್ಷಗಳಿಲ್ಲದ ಕರೆ ಭೂಮಿಯ ಬೈಲಿನಲ್ಲಿ ಚತುರರಾದ ಒಕ್ಕಲಿಗರ ದೊಡ್ಡ ದೊಡ್ಡ ಹಳ್ಳಿಗಳು ದೂರ ದೂರ ಇರುತ್ತವೆ.

**ಸ್ವರೂಪ.**

ಉತ್ತರ ಪೂರ್ವಗಳಲ್ಲಿ ಹತ್ತಿಯ ಕರೆ ಭೂಮಿಯುಂಟು; ಪಶ್ಚಿಮದಲ್ಲಿಯೂ ಕರೆ ಭೂಮಿಯನ್ನು ಕಾಣ ಬಹುದಾದಾಗ್ಯೂ ವಾಡಿಕೆಯಾಗಿ ಕೆಂಪು ನೆಲವೇ ಹೆಚ್ಚು.

**ಭೂಮಿ.**

ಹವೆಯು ಮಧ್ಯಮ ಮಾನದ್ದು, ಆರೋಗ್ಯದ್ದು; ಪೂರ್ವ ಭಾಗದಲ್ಲಿ ಶಕೆ ಹೆಚ್ಚು. ಬ್ಯಾಹಟ್ಟಿಯ ನೆರೆಯಲ್ಲಿ ಮಳೆ ಕಡಿಮೆ ಆಗುತ್ತಿದ್ದಾಗ್ಯೂ ಭೂಮಿಯು ಬಹು ಬೆಳೆಯುಳ್ಳದ್ದಿರುತ್ತದೆ. ಹುಬ್ಬಳ್ಳಿಯಲ್ಲಿ ಮಳೆ ೧೪ರಿಂದ ೪೩ ಇಂಚಿನ ವರೆಗೆ, ಸರಾಸರೀ ೨೮ ಇಂಚು. ಪಶ್ಚಿಮ ಭಾಗದಲ್ಲಿ ಶಾಲ್ಮಲಾ ಮುಂತಾದ ಸಣ್ಣ ಸರುವುಗಳೇ ಮುಖ್ಯ ಜಲಾಶಯಗಳು; ಪೂರ್ವ ಭಾಗದಲ್ಲಿ ಬೆಣ್ಣೀ ಹಳ್ಳವಿರುತ್ತದೆ. ಯೆಲ್ಲ ಕಡೆಯಲ್ಲಿ ಸಣ್ಣ ದೊಡ್ಡ ಕೆರೆಗಳುಂಟು. ಪಶ್ಚಿಮದ ಕೆರೆಗಳ ನೀರು ಶೀ, ವಿಪುಲ; ಪೂರ್ವದ ಕೆರೆಗಳ ನೀರು ಸೌಳು, ಅಲ್ಪ. ಬೇಸಿಗೆಯಲ್ಲಿ ಯಾವತ್ತು ಸರುವುಗಳೂ ಕೆರೆಗಳೂ ಬತ್ತಿ ಒಮ್ಮೊಮ್ಮೆ ನೀರಿನ ಕೊರತೆಯಾಗುತ್ತದೆ.

**ಹವೆ, ಮಳೆ, ನೀರು.**

ಒಟ್ಟು ಜನಸಂಖ್ಯದಲ್ಲಿ ಶೇಕಡಾ ೮೦·೩೦ ಹಿಂದೂ ಜನರು, ೧೭·೦೭ ಮುಸಲ್ಮಾನರು, ೦·೪೧ ಕ್ರಿಸ್ತಿಗಳು. ಹಿಂದೂ ಜನರಲ್ಲಿ ಬ್ರಾಹ್ಮಣರು ೨೫೫೪, ಲಿಂಗವಂತರು ೩೧೪೩೪, ಜೈನರು ೧೫೪೦, ಆರೇರು ೩೪೮೦, ರಡ್ಡೇರು ೧೯೪೭, ಪಂಚಾಳರು ೧೪೬೦, ಕುರುಬರು ೯೦೧೫, ಜೇಡರು ೪೭೪೯, ಗಾಣಿಗರು ೨೧೨೭, ಬೇಡರು ೩೩೩೦, ಇತ್ಯಾದಿ.

**ಜನರು.**

ಕಲಘಟಗಿಯ ತಾಲೂಕು.—ಜಿಲ್ಲೆಯ ಪಶ್ಚಿಮ ಭಾಗದಲ್ಲಿ ಧಾರವಾಡ ತಾಲೂಕಿನ ದಕ್ಷಿಣಕ್ಕೆ ಇರುತ್ತದೆ. ಸರಕಾರೀ ಹಳ್ಳಿಗಳು ೧೦೧, ದುಮಾಲೀ ೨೦; ಕ್ಷೇತ್ರಫಲ ೨೭೯ ಚ. ಮೈಲು, ಜನಸಂಖ್ಯ ೫೦೭೯. ಭೂಮಿಯ ಕಂದಾಯ ೧೯೯೮೫೦ ರೂಪಾಯಿ.

**ಕ್ಷೇತ್ರ.**

ಬಹುತರ ಯೆಲ್ಲ ಕಡೆಯಲ್ಲಿ ಗುಡ್ಡಗಳೂ ಅಡವಿಯೂ ವುಂಟು; ದಕ್ಷಿಣ ಪೂರ್ವ ಭಾಗಗಳಲ್ಲಿ ಸ್ವಲ್ಪ ಕಡಿಮೆ. ಹಳ್ಳಿಗಳ ಸುತ್ತು ಮುತ್ತು ಗೋಡೆಗಳಿಲ್ಲ; ಅವು ದಟ್ಟಾಗಿರುತ್ತವೆ. ಬಹುತರ ಯೆಲ್ಲ ಕಡೆಯಲ್ಲಿ ಕೆಂಪು ಭೂಮಿಯು; ಕೆಲವು ಕಡೆಯಲ್ಲಿ ಗರಸಿನ ನೆಲವುಂಟು.

**ಸ್ವರೂಪ, ಭೂಮಿ.**

ಮಳೆಗಾಲದಲ್ಲಿ ಶೈತ್ಯ ಬಹಳಾಗಿ ರೋಗಗಳು ಉದ್ಭವಿಸುತ್ತವೆ. ಚಳಿಗಾಲದಲ್ಲಿ ಚಳಿ ಹೆಚ್ಚಾದಾಗ್ಯೂ ಆರೋಗ್ಯವಿರುತ್ತದೆ. ಪಶ್ಚಿಮ ಭಾಗದಲ್ಲಿ ಮಳೆ ಬಹಳ. ಕಲಘಟ

ಗಿಯಲ್ಲಿ ೨೦ ಇಂಚಿನಿಂದ ೪೩ರ ವರೆಗೆ ಮಳೆಯಾಗುತ್ತವೆ; ಸರಾಸರೀ ೨೯ ಇಂಚು.

**ಹವೆ, ಮಳೆ, ನೀರು.**

ನೀರು ಸಮೃದ್ಧಿಯುಂಟು. ಬಿಡತೀ ಹಳ್ಳ, ಕಲ್ಲ ಹಳ್ಳ, ಇವೆರಡು ದೊಡ್ಡ ಹಳ್ಳಗಳು ಈ ತಾಲೂಕಿನೊಳಗಿಂದ ಹರಿಯುತ್ತವೆ; ಇವಲ್ಲದೆ ಊರೂರಿಗೆ ಕೆರೆಗಳಿವೆ. ಈ ಹಳ್ಳಗಳ ಪ್ರವಾಹವು ಬೇಸಿಗೆಯಲ್ಲಿ ಕಡಿದಾಗ್ಯೂ ಅಲ್ಲಲ್ಲಿಗೆ ನೀರು ನಿಂತಿರುತ್ತದೆ.

**ಜನರು.**

ಒಟ್ಟು ಜನಸಂಖ್ಯದಲ್ಲಿ ಶೇಕಡಾ ೮೯·೬೦ ಹಿಂದೂ ಜನರು, ೯·೩೦ ಮುಸಲ್ಮಾನರು, ೧·೦೮ ಕ್ರಿಸ್ತಿಗಳು. ಹಿಂದೂ ಜನರಲ್ಲಿ ಬ್ರಾಹ್ಮಣರು ೯೪೬, ಲಿಂಗವಂತರು ೨೦೮೯೩, ಜೈನರು ೧೨೭೨, ಆರೇರು ೬೫೧೬, ಕುರುಬರು ೨೧೬೦, ಬೇಡರು ೨೯೦೨, ವೊಡ್ಡರು ೧೧೦೪, ಮಾದಿಗರು ೧೨೫೦, ಹೊಲಿಯರು ೧೨೪೬, ಇತ್ಯಾದಿ.

**ಕ್ಷೇತ್ರ.**

ಕರ್ಜಗೀ ತಾಲೂಕು.—ಜಿಲ್ಲೆಯ ಮಧ್ಯ ಭಾಗದ ಆಗ್ನೇಯದಲ್ಲಿ ಲಕ್ಷ್ಮೇಶ್ವರ ತಾಲೂಕಿನ ದಕ್ಷಿಣಕ್ಕೆ ಇರುತ್ತದೆ. ಸರಕಾರೀ ಹಳ್ಳಿಗಳು ೧೪೧, ದುಮಾಲೀ ೬. ಕ್ಷೇತ್ರ ೪೪೨ ಚ. ಮೈಲು, ಜನಸಂಖ್ಯ ೮೩೨೧೬; ಭೂಮಿಯ ಕಂದಾಯ ೧೨೯೩೨೦.

**ಸ್ವರೂಪ, ಭೂಮಿ.**

ನೈರುತ್ಯದಲ್ಲಿ ಮಾತ್ರ ಸ್ವಲ್ಪ ಗುಡ್ಡಗಳಿವೆ, ಉಳಿದಷ್ಟೆಲ್ಲ ಬೈಲು; ವರದಾ ನದಿಯು ಈ ತಾಲೂಕಿನೊಳಗಿಂದ ಹರಿಯುತ್ತದೆ. ಪಶ್ಚಿಮದಲ್ಲಿ ಹಳ್ಳಿಗಳು ದಟ್ಟ, ಸಣ್ಣವು, ಪೂರ್ವದಲ್ಲಿ ಅಂಗಲ, ದೊಡ್ಡವು. ಪಶ್ಚಿಮ ದಕ್ಷಿಣಗಳಲ್ಲಿ ಭೂಮಿ ಕೆಂಪು, ಉಳಿದ ಕಡೆಯಲ್ಲಿ ಎರೆ.

**ಹವೆ, ಮಳೆ, ನೀರು.**

ಪಶ್ಚಿಮ ದಕ್ಷಿಣಗಳಲ್ಲಿ ಹವೆ ಉಷ್ಣ, ಸ್ವಲ್ಪ ಅನಾರೋಗ್ಯದ್ದು; ಆದರೂ ವೊಟ್ಟಿನಲ್ಲಿ ಹವೆಯು ಆರೋಗ್ಯದ್ದು. ಮಳೆಯು ಎಲ್ಲ ಕಡೆಯಲ್ಲಿ ಸಮನಾಗಿ ಆಗುತ್ತದೆ. ಕರ್ಜಗಿಯಲ್ಲಿ ೧೩ ಇಂಚಿನಿಂದ ೩೪ರ ವರೆಗೆ, ಸರಾಸರೀ ೨೬ ಇಂಚು. ಪೂರ್ವ ಮೇರೆಯಲ್ಲಿ ತುಂಗಭದ್ರೆಯೂ, ಮಧ್ಯ ಭಾಗದೊಳಗಿಂದ ವರದಾ ನದಿಯೂ ಹರಿಯುತ್ತಿರುವ ಕಾರಣ ನೀರಿನ ಸಮೃದ್ಧಿಯುಂಟು; ಹಳ್ಳಿಗಳಿಗೆ ಕೆರೆಗಳೂ ಇರುತ್ತವೆ.

**ಜನರು.**

ಒಟ್ಟು ಜನಸಂಖ್ಯದಲ್ಲಿ ಶೇಕಡಾ ೯೦·೨೬ ಹಿಂದೂ ಜನರು, ೯·೭೩ ಮುಸಲ್ಮಾನರು. ಹಿಂದೂ ಜನರಲ್ಲಿ ಬ್ರಾಹ್ಮಣರು ೨೭೨೭, ಲಿಂಗವಂತರು ೩೦೭೫೭, ಆರೇರು ೨೦೭೧, ರಡ್ಡೇರು ೧೮೯೬, ಪಂಚಾಳರು ೧೮೧೮, ಗಾಣಿಗರು ೨೩೪೩, ಜೇಡರು, ೧೧೭೦, ಕುರುಬರು ೧೦೨೪೪, ಬೇಡರು ೬೬೧೪, ಅಂಬಿಗರು ೨೮೧೬, ವೊಡ್ಡರು ೨೨೦೭, ಮಾದಿಗರು ೩೩೨೩, ಇತ್ಯಾದಿ.

ಕೋಡ ತಾಲೂಕು.—ಜಿಲ್ಲೆಯ ನೈರುತ್ಯ ಮೂಲೆಯಲ್ಲಿ ಹಾನಗಲ್ಲು ತಾಲೂಕಿನ ದಕ್ಷಿಣಕ್ಕೆ ಇರುತ್ತದೆ. ಸರಕಾರೀ ಹಳ್ಳಿಗಳು ೧೯೩, ದುಮಾಲೀ ೧೧;

ಕ್ಷೇತ್ರ ೪೦೦ ಚ. ಮೈಲು, ಜನಸಂಖ್ಯ ೮೦೩೪೫; ಭೂಮಿಯ ಕಂದಾಯ ೧೮೬೬೩೦ ರೂಪಾಯಿ.

**ಸ್ವರೂಪ, ಭೂಮಿ.**

ಈ ತಾಲೂಕಿನಲ್ಲಿ ನಡು ನಡುವೆ ಗುಡ್ಡಗಳೂ ಕೆರೆಗಳೂ ವುಂಟು; ಕೆರೆಗಳು ತುಂಬಿದಾಗ ೧೨,೩ ಮೈಲು ಉದ್ದ ಇರುತ್ತವೆ; ಯೆಲ್ಲ ಕಡೆಯಲ್ಲಿಯೂ ನೀರು ಆಡುತ್ತಿರುವ ಕಾರಣ ಅಲ್ಲಲ್ಲಿಗೆ ತೋಟಗಳಾಗಿವೆ. ಹಳ್ಳಿಗಳು ದಟ್ಟಿ ಸಣ್ಣವು, ಅವುಗಳಿಗೆ ಸುತ್ತು ಗೋಡೆ ಇಲ್ಲ. ಭೂಮಿಯು ಮುಖ್ಯವಾಗಿ ಕೆಂಪು; ಕರೆ ಭೂಮಿ ಅಪರೂಪ.

**ಹವೆ, ಮಳೆ, ನೀರು.**

ನೆಲ ತೇವು ಇರುವ ಕಾರಣ ಚಳಿಗಾಲದಲ್ಲಿ ಜ್ವರೋಪದ್ರವ ಬಹಳ; ಬೇಸಿಗೆಯಲ್ಲಿ ಆರೋಗ್ಯವು ವೊಳಿತಾಗಿರುತ್ತದೆ. ಹಿರೇ ಕೆರೂರಿನಲ್ಲಿ ಮಳೆ೧೬ ಇಂಚಿನಿಂದ ೩೩ರ ವರೆಗೆ, ಸರಾಸರೀ ೨೫ ಇಂಚು. ಆಗ್ನೇಯ ಮೂಲೆಯಲ್ಲಿ ತುಂಗಭದ್ರೆಯಲ್ಲದೆ ಮದಗದ ಹೆಸರಾದ ಕೆರೆಯಿಂದ ಕುಮುದ್ವತಿಯು ಹೊರಟು ತಾಲೂಕಿನೊಳಗಿಂದ ಹರಿಯುತ್ತದೆ. ಇದಲ್ಲದೆ ಈ ತಾಲೂಕಿನಷ್ಟು ದೊಡ್ಡ ದೊಡ್ಡ ಕೆರೆಗಳು ಯಾವ ತಾಲೂಕಿನಲ್ಲಿಯೂ ಇಲ್ಲ.

ಒಟ್ಟು ಜನಸಂಖ್ಯದಲ್ಲಿ ಶೇಕಡಾ ೯೧·೧೦ ಹಿಂದೂ ಜನರು, ೮·೯ ಮುಸಲ್ಮಾನರು. ಹಿಂದೂ ಜನರಲ್ಲಿ ಬ್ರಾಹ್ಮಣರು ೧೮೫೧, ಲಿಂಗವಂತರು ೩೫೭೭೮, ಆರೇರು ೨೧೭೩, ಕುರುಬರು ೭೦೦೩, ಬೇಡರು ೮೦೮೬, ವೊಡ್ಡರು ೨೬೭೪, ಮಾದಿಗರು ೩೮೫೮, ಇತ್ಯಾದಿ.

**ಕ್ಷೇತ್ರ.**

ನವಲಗುಂದ ತಾಲೂಕು.—ಜಿಲ್ಲೆಯ ಉತ್ತರದಲ್ಲಿ ಬೆಳಗಾವೀ ಜಿಲ್ಲೆಯ ದಕ್ಷಿಣಕ್ಕೆ. ಸರಕಾರೀ ಹಳ್ಳಿಗಳು ೯೦, ದುಮಾಲೀ ೭; ಕ್ಷೇತ್ರ ೫೬೨, ಜನಸಂಖ್ಯ ೮೭೮೩೨, ಭೂಮಿಯ ಕಂದಾಯ ೩೮೨೮೨೬೦ ರೂಪಾಯಿ.

**ಸ್ವರೂಪ, ಭೂಮಿ.**

ಒಂದೇ ಸವನಾದ ಕರೆ ಭೂಮಿಯೇ ಯೆಲ್ಲ ಕಡೆಯಲ್ಲಿ; ಗುಡ್ಡಗಳು ಬಹುತರ ಇಲ್ಲ; ಜಾಲೀ ಮರವೇ ಮರ, ಹಳ್ಳಿಗಳು ದೊಡ್ಡವು, ದೂರ ದೂರ.

**ಹವೆ, ಮಳೆ, ನೀರು.**

ಕೆಂಪು ಭೂಮಿಗಿಂತ ಕರೆ ನೆಲವು ಬೇಸಿಗೆಯಲ್ಲಿ ಹೆಚ್ಚು ಕಾಯುತ್ತದೆ, ಚಳಿಗಾಲದಲ್ಲಿ ಹೆಚ್ಚು ತಂಪಾಗುತ್ತದೆ. ಮಳೆ ನೇಮದ್ದಲ್ಲ; ನವಲಗುಂದದಲ್ಲಿ ೭ರಿಂದ ೪೦ ಇಂಚಿನ ವರೆಗೆ, ಸರಾಸರೀ ೨೦ ಇಂಚು. ಈಶಾನ್ಯ ಮೇರೆಯಲ್ಲಿ ಮಲಾಪಹಾರಿಯು ೧೫ ಮೈಲು ಇರುತ್ತದೆ. ಬೆಣ್ಣೇ ಹಳ್ಳವು ತಾಲೂಕಿನೊಳಗಿಂದ ಹರಿಯುತ್ತದೆ; ಇದರ ನೀರು ಸೌಳು. ಕೆಲವು ಹಳ್ಳಿಗಳಿಗೆ ಕೆರೆಗಳೂ ಕೆಲವುಗಳಿಗೆ ಬಾವಿಗಳೂ ಉಂಟು. ಆದರೆ ಬೇಸಿಗೆಯಲ್ಲಿ ನೀರಿನ ಕೊರತೆಯಾಗುತ್ತದೆ.

ಒಟ್ಟು ಜನಸಂಖ್ಯದಲ್ಲಿ ಶೇಕಡಾ ೯೦·೭೧ ಹಿಂದೂ ಜನರು, ೯·೨೭ ಮುಸಲ್ಮಾನರು. ಹಿಂದೂ ಜನರಲ್ಲಿ ಬ್ರಾಹ್ಮಣರು ೨೫೧೩, ಲಿಂಗವಂತರು ೩೦೫೧೯, ರಡ್ಡೇರು ೩೬೪೯,

**ಜನರು.**

ಗಾಣಿಗರು ೩೮೮೦, ಜೇಡರು ೧೮೭೦, ಕುರುಬರು ೧೨೧೦೬, ಬೇಡರು ೩೭೪೨, ಅಂಬಿಗರು ೧೩೮೫, ವೊಡ್ಡರು ೧೨೩೮, ಮಾದಿಗರು ೨೦೨೬, ಹೊಲಿಯರು ೨೦೦೭ ಇತ್ಯಾದಿ.

**ಕ್ಷೇತ್ರ.**

ರಾಣೀಬಿನ್ನೂರು ತಾಲೂಕು.— ಜಿಲ್ಲೆಯ ಆಗ್ನೇಯ ಮೂಲೆಯಲ್ಲಿ ಕರ್ಜಗೀ ತಾಲೂಕಿನ ದಕ್ಷಿಣಕ್ಕೆ. ಸರಕಾರೀ ಗ್ರಾಮಗಳು ೧೩೧, ದುಮಾಲೀ ೧೨; ಕ್ಷೇತ್ರ ೪೦೫ ಚ. ಮೈಲು, ಜನಸಂಖ್ಯ ೭೪೨೧೭, ಭೂಮಿಯ ಕಂದಾಯ ೧೫೮೦೪೦ ರೂಪಾಯಿ.

**ಸ್ವರೂಪ, ಭೂಮಿ.**

ಉತ್ತರದಲ್ಲಿ ವೊಂದು ಕಿರಿಗುಡ್ಡವೂ, ಪೂರ್ವದಲ್ಲಿ ಕೆಲವು ಗುಡ್ಡಗಳೂ ಹೊರ್ತಾಗಿ ಸವನೆಲದ ಭೂಮಿಯುಂಟು. ಗುಡ್ಡಗಳ ನೆರೆಯಲ್ಲಿ ಕಿರಿ ಅಡವಿ ಇರುತ್ತದೆ. ಹಳ್ಳಿಗಳು ಸಣ್ಣವು ದಟ್ಟ. ಎತ್ತರದ ಪ್ರದೇಶಗಳಲ್ಲಿಯೂ ಗುಡ್ಡಗಳಲ್ಲಿಯೂ ಕೆಂಪು ನೆಲ, ಉಳಿದದ್ದೆಲ್ಲ ಕರೆ ಭೂಮಿ.

**ಹವೆ, ಮಳೆ, ನೀರು.**

ಪೂರ್ವ ಭಾಗದ ಹವೆಯು ಪಶ್ಚಿಮ ಭಾಗಕ್ಕಿಂತ ಉಷ್ಣ; ಆದರೆ ವೊಟ್ಟಿನಲ್ಲಿ ಆರೋಗ್ಯದ್ದು. ಮಳೆಯು ಯೆಲ್ಲ ಕಡೆಯಲ್ಲಿ ಬಹುತರ ಸವನಾಗಿ ಬೀಳುತ್ತದೆ; ರಾಣೀಬಿನ್ನೂರಲ್ಲಿ ೧೮ರಿಂದ ೩೫ ಇಂಚಿನ ವರೆಗೆ, ಸರಾಸರೀ ೨೨ ಇಂಚು. ದಕ್ಷಿಣ ಪೂರ್ವ ಮೇರೆಗಳಲ್ಲಿ ತುಂಗಭದ್ರೆಯಲ್ಲದೆ ತಾಲೂಕಿನೊಳಗಿಂದ ಕುಮುದ್ವತಿಯು ಉತ್ತರಕ್ಕೆ ಹರಿದು ತುಂಗಭದ್ರೆಗೆ ಕೂಡುತ್ತದೆ; ಬೇರೆ ಸರುವುಗಳೂ ಕೆರೆಗಳೂ ಕೆಲವುಂಟು. ಒಟ್ಟಿಗೆ ನೀರಿನ ತಾಪತ್ರಯವಿಲ್ಲ.

**ಜನರು.**

ಒಟ್ಟು ಜನಸಂಖ್ಯದಲ್ಲಿ ಶೇಕಡಾ ೯೧·೬೭ ಹಿಂದೂ ಜನರು, ೮·೩೧ ಮುಸಲ್ಮಾನರು. ಹಿಂದೂ ಜನರಲ್ಲಿ ಬ್ರಾಹ್ಮಣರು ೧೧೭೪, ಲಿಂಗವಂತರು ೨೮೭೪೪, ಆರೇರು ೨೦೮೯, ಪಂಚಾಳರು ೨೦೬೦, ಹಟಗಾರರು ೧೯೮೬, ಜೇಡರು ೩೪೮೨, ಕುರುಬರು ೮೯೨೬, ಬೇಡರು ೫೨೬೧, ವೊಡ್ಡರು ೧೧೭೭, ಮಾದಿಗರು ೩೪೪೧, ಇತ್ಯಾದಿ.

**ಕ್ಷೇತ್ರ.**

ರೋಣ ತಾಲೂಕು.— ಜಿಲ್ಲೆಯ ಈಶಾನ್ಯ ಮೂಲೆಯಲ್ಲಿ ಬಾದಾಮೀ ತಾಲೂಕಿನ ದಕ್ಷಿಣಕ್ಕೆ. ಸರಕಾರೀ ಹಳ್ಳಿಗಳು ೭೦, ದುಮಾಲೀ ೪; ಕ್ಷೇತ್ರ ೩೭೦ ಚ. ಮೈಲು, ಜನಸಂಖ್ಯ ೬೦೭೨೪, ಭೂಮಿಯ ಕಂದಾಯ ೧೬೧೪೪೭೦ ರೂಪಾಯಿ.

**ಸ್ವರೂಪ, ಭೂಮಿ.**

ಎಲ್ಲ ಕಡೆಯಲ್ಲಿ ಬಹು ಬೆಲೆಯುಳ್ಳ ಸವನೆಲದ ಕರೆ ಭೂಮಿಯೇ ಹಬ್ಬಿರುವದು; ಒಕ್ಕಲತನವು ಸರಸಾಗಿ ಸಾಗುತ್ತದೆ; ಒಕ್ಕಲಿಗರು ದೈವುಳ್ಳವರು, ಹಳ್ಳಿಗಳು ದೂರ ದೂರ, ದೊಡ್ಡವು. ಊರೊಳಗೆ ಸಹ ಮರಗಳಿಲ್ಲ. ಪೂರ್ವ ಉತ್ತರ ಭಾಗಗಳಲ್ಲಿ ಅಪರೂಪವಾಗಿ ಕೆಂಪು ಭೂಮಿಯನ್ನು ಕಾಣ ಬಹುದು.

ಮಳೆಗಾಲ ಆರೋಗ್ಯದ್ದು; ಚಳಿಗಾಲದಲ್ಲಿ ಜ್ವರೋಪದ್ರವ ಸ್ವಲ್ಪ ಆಗುತ್ತದೆ. ಮಳೆ ಅನಿಯಮಿತ; ರೋಣದಲ್ಲಿ ೭ರಿಂದ ೩೭ ಇಂಚಿನ ವರೆಗೆ, ಸರಾಸರೀ ೨೩ ಇಂಚು.

**ಹವೆ, ಮಳೆ, ನೀರು.** ವಾಯವ್ಯ ಮೇರೆಯಲ್ಲಿ ಮಲಾಪಹಾರಿಯೂ ಬೆಣ್ಣೀ ಹಳ್ಳವೂ ಹರಿಯುತ್ತವೆ. ಕೆಲವು ಗ್ರಾಮಗಳಿಗೆ ಕೆರೆಗಳೂ ಕೆಲವುಗಳಿಗೆ ಬಾವಿಗಳೂ ಇರುತ್ತವೆ. ನೀರಿನ ಕೊರತೆಯುಂಟು.

ಒಟ್ಟು ಜನಸಂಖ್ಯದಲ್ಲಿ ೯೨೦·೪೮ ಹಿಂದೂ ಜನರು, ೭·೫೧ ಮುಸಲ್ಮಾನರೂ. ಹಿಂದು

**ಜನರು.** ಗಳಲ್ಲಿ ಬ್ರಾಹ್ಮಣರು ೪೮೪೯, ಲಿಂಗವಂತರು ೧೯೭೫೦, ರಡ್ಡೇರು ೨೯೫೯, ಆರೇರು ೯೪೭, ಪಂಚಾಳರು ೧೪೬೪, ಗಾಣಿಗರು ೩೯೨೬, ಜೇಡರು ೧೩೬೯, ಕುರುಬರು ೮೦೯೫, ಬೇಡರು ೪೦೬೮, ವೊಡ್ಡರು ೧೦೬೭, ಮಾದಿಗರು ೨೩೧೯, ಇತ್ಯಾದಿ.

# ಬೆಳಗಾವೀ ಜಿಲ್ಲೆ.

ಅಥಣೀ ತಾಲೂಕು.—ಜಿಲ್ಲೆಯ ಈಶಾನ್ಯ ಮೂಲೆಯಲ್ಲಿ ವಿಜಾಪುರ ತಾಲೂ

**ಕ್ಷೇತ್ರ.** ಕಿನ ದಕ್ಷಿಣಕ್ಕೆ. ಸರಕಾರೀ ಹಳ್ಳಿಗಳು ೬೫, ದುಮಾಲೀ ೧೭. ಕ್ಷೇತ್ರ ೭೮೬ ಚ. ಮೈಲು, ಜನಸಂಖ್ಯ ೧೦೫೯೬೧, ಭೂಮಿಯ ಕಂದಾಯ ೧೫೮೬೨೦ ರೂಪಾಯಿ.

ಪಶ್ಚಿಮದಲ್ಲಿ ವೃಕ್ಷಗಳಿಲ್ಲದ ಹರವಾದ ಗುಡ್ಡಗಳಿವೆ; ಅವು ವೊಂದರ ಹಿಂದೊಂದು ಪಾವಟಿಗೆಗಳ ಹಾಗೆ ಕಾಣುತ್ತವೆ. ಬೈಲು ಪ್ರದೇಶದಲ್ಲಿ ಸಹ ನೆಲವು ತೆರೆಗಳ ಹಾಗೆ

**ಸ್ವರೂಪ, ಭೂಮಿ.** ತಗ್ಗು ದಿನ್ನೆಯಾಗಿರುತ್ತದೆ. ತಗ್ಗುಗಳಲ್ಲಿ ಸರವುಗಳು ಮಳೆಗಾಲದಲ್ಲಿ ಹರಿಯುತ್ತವೆ; ಭೂಮಿ ಮೇಲಾದದ್ದು. ದಿನ್ನೆಗಳ ಮೇಲಿನ ಭೂಮಿ ಬಿರುಸು, ಮಣ್ಣು ಬಹಳಿಲ್ಲ. ಕೃಷ್ಣಾ ತೀರದಲ್ಲಿ ಹಳ್ಳಿಗಳು ದಟ್ಟ, ಬೇರೆ ಕಡೆಯಲ್ಲಿ ಅಂಗಲ; ಅವುಗಳಿಗೆ ಸುತ್ತು ಗೋಡೆಗಳಿವೆ. ಯಾವತ್ತು ಕರೆ ಭೂಮಿ; ಕೃಷ್ಣೆಯ ಯೆಡ ಬಲದಲ್ಲಿ ೩, ೪ ಮೈಲಿನ ವರೆಗೆ ಉತ್ತಮವಾದ ಸಣ್ಣ ಯೆರೆಯುಂಟು. ಅದೇ ಪ್ರದೇಶದಲ್ಲಿ ಹುಣಚೆ, ಬೇವು, ಜಾಲಿ, ಅರಳೆ, ಇಂಥಾ ಮರಗಳನ್ನೂ ಕಾಣ ಬಹುದು; ಬೇರೆ ಕಡೆಯಲ್ಲಿ ಮರಗಳಿಲ್ಲ.

ಹವೆ ಆರೋಗ್ಯದ್ದು, ಅದರಲ್ಲಿ ಶೈತ್ಯವಿಲ್ಲ. ವಾಡಿಕೆಯಾಗಿ ಮಳೆಯು ನಿಯಮದ್ದಲ್ಲ; ಪೂರ್ವ ಭಾಗದಲ್ಲಿ ಯೆಲ್ಲಕ್ಕೂ ಕಡಿಮೆ; ಅಥಣಿಯಲ್ಲಿ ೭ರಿಂದ ೩೪ ಇಂಚಿನ ವರೆಗೆ;

**ಹವೆ, ಮಳೆ, ನೀರು.** ಸರಾಸರೀ ೨೪ ಇಂಚು. ದಕ್ಷಿಣ ಭಾಗದಲ್ಲಿ ಕೃಷ್ಣೆಯೇ ನೀರಿನ ಮುಖ್ಯ ಆಶ್ರಯ. ಪಶ್ಚಿಮ ಭಾಗದಲ್ಲಿ ಅಗರ್ಣಿ ಯೆಂಬ ಹಳ್ಳವು ಉತ್ತರದಿಂದ ದಕ್ಷಿಣಕ್ಕೆ ಹರಿದು ಕೃಷ್ಣೆಗೆ ಕೂಡುತ್ತದೆ. ಇದಲ್ಲದೆ ಬೇರೆ ಸಣ್ಣ

ಸರುವುಗಳು ಹಲವುಂಟು. ಅವು ಬೇಸಿಗೆಯಲ್ಲಿ ವೊಣಗಿದ್ದಾಗ್ಯೂ, ಅವುಗಳ ಪಾತ್ರಿಗಳಲ್ಲಿ ವೊರತೆಗಳನ್ನು ಕಡಿದು ನೀರಿಗೆ ಆಶ್ರಯ ಮಾಡಿಕೊಳ್ಳುವರು. ಸರುವುಗಳಿಲ್ಲದ ಪ್ರದೇಶಗಳಲ್ಲಿ ಬಾವಿಗಳು, ಕೆಲವು ಕಡೆಯಲ್ಲಿ ಕೆರೆಗಳು, ಉಂಟು. ಅವು ಬೇಸಿಗೆಯಲ್ಲಿ ಬತ್ತಿದವೆಂದರೆ ನೀರಿನ ತಾಪತ್ರಯವಾಗುತ್ತದೆ.

**ಜನರು.**

ಒಟ್ಟು ಜನಸಂಖ್ಯದಲ್ಲಿ ಶೇಕಡಾ ೮೯·೬೯ ಹಿಂದೂ ಜನರು, ೧೦·೨೯ ಮುಸಲ್ಮಾನರು. ಹಿಂದೂಗಳಲ್ಲಿ ಬ್ರಾಹ್ಮಣರು ೫೧೧೦, ಜೈನರು ೧೧೬೧೭, ಆರೇರು ೧೩೩೨೮, ರಡ್ಡೇರು ೧೨೦೯, ಕುರುಬರು ೯೩೩೩, ಕಬ್ಬಲಿಗೇರು ೩೪೩೬, ಬೇಡರು ೧೭೭೦, ಹೊಲಿಯರು ೬೪೩೩, ಮಾದಿಗರು ೨೭೯೬, ಇತ್ಯಾದಿ.

**ಕ್ಷೇತ್ರ.**

ಚಿಕ್ಕೋಡೀ ತಾಲೂಕು.—ಜಿಲ್ಲೆಯ ವಾಯವ್ಯ ಮೂಲೆಯಲ್ಲಿ ಕೊಲ್ಲಾಪುರ ಸಂಸ್ಥಾನದ ದಕ್ಷಿಣಕ್ಕೆ. ಸರಕಾರೀ ಹಳ್ಳಿಗಳು ೧೫೮, ದುಮಾಲೀ ೫೭. ಕ್ಷೇತ್ರ ೮೪೦ ಚ. ಮೈಲು, ಜನಸಂಖ್ಯೆ ೨೪೫೬೧೪; ಭೂಮಿಯ ಕಂದಾಯ ೨೬೧೪೪೦ ರೂಪಾಯಿ.

**ಸ್ವರೂಪ, ಭೂಮಿ.**

ಉತ್ತರ ಭಾಗವು ಮೇಲಾದ ಕರೆ ಭೂಮಿಯ ಬೈಲು; ಆಗ್ನೇಯದಲ್ಲಿಯೂ ದಕ್ಷಿಣದಲ್ಲಿಯೂ ಗುಡ್ಡಗಳೂ ಅಡವಿಯೂ ಉಂಟು. ಕೃಷ್ಣಾ, ಘಟಪ್ರಭಾ, ಹರಣಕಾಶಿ, ಹೊಳೆಗಳ ನೆರೆ ಭೂಮಿ ಮೇಲಾದದ್ದು. ಪಶ್ಚಿಮದಲ್ಲಿ ಕೆಂಪು, ಉಳಿದದ್ದೆಲ್ಲ ಕರೆ ಭೂಮಿ; ಉತ್ತರದ ಭೂಮಿ ಮೇಲಾದದ್ದು. ಈ ತಾಲೂಕಿನಲ್ಲಿ ತೋಟಗಳು ಬಹಳ.

**ಹವೆ, ಮಳೆ, ನೀರು.**

ದಕ್ಷಿಣ ಭಾಗದ ಹವೆ ರೋಗಕಾರಕ; ಉಳಿದ ಕಡೆಯಲ್ಲೆಲ್ಲ ವಾಡಿಕೆಯಾಗಿ ಆರೋಗ್ಯದ್ದು. ದಕ್ಷಿಣದಲ್ಲಿ ಮಳೆ ಹೆಚ್ಚು, ಪೂರ್ವದಲ್ಲಿ ಬಹು ಕಡಿಮೆ. ಚಿಕ್ಕೋಡಿಯಲ್ಲಿ ೧೧ರಿಂದ ೩೭ ಇಂಚಿನ ವರೆಗೆ; ಸರಾಸರೀ ೨೫ ಇಂಚು. ಉತ್ತರದಲ್ಲಿ ಕೃಷ್ಣಾ, ವೇದಗಂಗಾ, ದೂಧಗಂಗಾ ಹೊಳೆಗಳು, ದಕ್ಷಿಣದಲ್ಲಿ ಘಟಪ್ರಭಾ, ಹರಣಕಾಶಿ, ಹೊಳೆಗಳು. ಇವಲ್ಲದೆ ಮಳೆಗಾಲದ ಸರುವುಗಳು ಹಲವುಂಟು. ಒಟ್ಟಿಗೆ ನೀರು ವಿಪುಲ.

**ಜನರು.**

ಒಟ್ಟು ಜನಸಂಖ್ಯದಲ್ಲಿ ಶೇಕಡಾ ೯೩ ಹಿಂದೂ ಜನರು, ೭ ಮುಸಲ್ಮಾನರು, ೪೦ ಜನ ಕ್ರಿಸ್ತಿಗಳು. ಹಿಂದೂಗಳಲ್ಲಿ ಬ್ರಾಹ್ಮಣರು ೯೨೮೯, ಜೈನರು ೨೨೦೦೦, ಆರೇರು ೩೪೭೨೬, ಕುಣಬಿಗಳು ೮೯೨೯, ಹಣಬರು ೫೫೫೪, ತಿಳಾರಿಗಳು ೨೩೦೯, ಪಂಚಾಳರು ೨೫೧೩, ಜೇಡರು ೨೨೮೬, ಹಟಗಾರರು ೧೬೫೬, ಲಿಂಗವಂತರು ೭೬೩೬೬, ಕಬ್ಬಲಿಗೇರು ೪೪೬೦, ಕುರುಬರು ೧೨೦೯೨, ಬೇಡರು ೬೨೭೪, ಕೊರವರು ೧೦೧೧, ಹೊಲಿಯರು ೧೭೮೯೭, ಮಾದಿಗರು ೪೬೧೭, ಇತ್ಯಾದಿ.

**ಗೋಕಾವಿಯ ತಾಲೂಕು.**—ಜಿಲ್ಲೆಯ ಪೂರ್ವ ಭಾಗದಲ್ಲಿ ಅಥಣೀ ತಾಲೂಕಿನ ದಕ್ಷಿಣಕ್ಕೆ. ಸರಕಾರೀ ಹಳ್ಳಿಗಳು ೮೫, ದುಮಾಲೀ ೩೫. **ಕ್ಷೇತ್ರ.** ಕ್ಷೇತ್ರ ೬೨೦ ಚ. ಮೈಲು, ಜನಸಂಖ್ಯೆ ೯೩೦೭೯, ಭೂಮಿಯ ಕಂದಾಯ ೧೩೧೪೪೦ ರೂಪಾಯಿ.

ಪಶ್ಚಿಮ ಭಾಗದಲ್ಲಿ ಗುಡ್ಡಗಳಿವೆ; ಉಳಿದದ್ದೆಲ್ಲ ಬೈಲು. ದಕ್ಷಿಣ ಭಾಗದಲ್ಲಿ ಘಟಪ್ರಭೆಯು ಹರಿಯುತ್ತದೆ. ನದೀ ತೀರದ ಭೂಮಿ ಸಣ್ಣ ಯೆರೆ, **ಸ್ವರೂಪ, ಭೂಮಿ.** ಬೆಳೆಯುಳ್ಳದ್ದು. ಪೂರ್ವ ಭಾಗದಲ್ಲಿ ಬಡ ನೆಲ; ಪಶ್ಚಿಮದಲ್ಲಿ ಉಸುಬು ಕೂಡಿದ ಭೂಮಿ. ಬಹುತರ ಯೆಲ್ಲ ಕಡೆಯಲ್ಲಿ ಕೆಂಪು ಯೆರೆ ಭೂಮಿ ಮಿಶ್ರ.

ಹವೆ ವಾಡಿಕೆಯಾಗಿ ಅನಾರೋಗ್ಯದ್ದು; ಚಳಿಗಾಲದಲ್ಲಿ ಜ್ವರೋಪದ್ರವ, ಬೇಸಿಗೆಯಲ್ಲಿ ಶಕೆ ಬಹಳ. ಪಶ್ಚಿಮದಲ್ಲಿ ಮಳೆ ವಿಪುಲ, ಪೂರ್ವದಲ್ಲಿ ಕಡಿಮೆ; ಗೋಕಾವಿಯಲ್ಲಿ ೨೦ರಿಂದ ೩೩ ಇಂಚಿನ ವರೆಗೆ, ಸರಾಸರಿ ೭೧ ಇಂಚು. **ಹವೆ, ಮಳೆ, ನೀರು.** ಘಟಪ್ರಭೆಯಲ್ಲದೆ ಬೇರೆ ಹಲವು ಸರುವುಗಳು ಹರಿಯುತ್ತವೆ. ಆದರೆ ಅವೆಲ್ಲ ಬೇಸಿಗೆಯಲ್ಲಿ ವೊಣಗುತ್ತವೆ; ಕೆರೆಗಳೂ ಬಾವಿಗಳೂ ಬತ್ತಿ ನೀರಿನ ತಾಪತ್ರಯವಾಗುತ್ತದೆ.

ಒಟ್ಟು ಜನಸಂಖ್ಯೆದಲ್ಲಿ ಶೇಕಡಾ ೯೩·೬೦ ಹಿಂದೂ ಜನರು, ೬·೩೫ ಮುಸಲ್ಮಾನರು. ಹಿಂದೂಗಳಲ್ಲಿ ಬ್ರಾಹ್ಮಣರು ೭೬೫೫, ಜೈನರು ೭೧೦೦, ಛತ್ರೇರು ೪೦೨೬, ಆರೇರು ೩೩೪೭, ರಡ್ಡೇರು ೭೯೪೦, ಹಣಬರು ೧೦೨೦, ಉಪ್ಪಾರರು **ಜನರು.** ೫೯೭೫, ಜೇಡರು ೧೩೨೨, ಪಂಚಾಳರು ೧೧೭೬, ಲಿಂಗವಂತರು ೭೮೯೮೧, ಕುರುಬರು ೧೭೩೪೪, ಕಬ್ಬಲಿಗೇರು ೭೪೦೧, ಬೇಡರು ೨೮೩೦, ಹೊಲಿಯರು ೩೭೬೫, ಮಾದಿಗರು ೧೮೬೬, ಇತ್ಯಾದಿ.

**ಪರಸಗಡ ತಾಲೂಕು.**—ಜಿಲ್ಲೆಯ ಆಗ್ನೇಯದಲ್ಲಿ ಗೋಕಾವೀ ತಾಲೂಕಿನ ದಕ್ಷಿಣಕ್ಕೆ. ಸರಕಾರೀ ಹಳ್ಳಿಗಳು ೧೧೦, ದುಮಾಲೀ ೭೩. **ಕ್ಷೇತ್ರ.** ಕ್ಷೇತ್ರ ೬೪೦ ಚ. ಮೈಲು, ಜನಸಂಖ್ಯೆ ೯೧೮೭೬, ಭೂಮಿಯ ಕಂದಾಯ ೧೮೨೪೪೦ ರೂಪಾಯಿ.

ಆಗ್ನೇಯದಿಂದ ವಾಯುವ್ಯದ ವರೆಗೆ ಗುಡ್ಡಗಳ ಸಾಲು ಇರುತ್ತದೆ. ಅದರಿಂದ ತಾಲೂಕಿನಲ್ಲಿ ಆದ ಯೆರಡು ಸಮ ಭಾಗಗಳಲ್ಲಿ ಪಶ್ಚಿಮ ಭಾಗವು ವೊಳಿತಾಗಿ ಬೆಳೆಯುಳ್ಳದ್ದಿರುತ್ತದೆ; ಪೂರ್ವ ಭಾಗದಲ್ಲಿ ಸಣ್ಣ ಗುಡ್ಡಗಳೂ ಉಸುಬಿನ **ಸ್ವರೂಪ, ಭೂಮಿ.** ಭೂಮಿಯೂ ಉಂಟು. ಮಲಾಪಹಾರಿಯು ಈ ತಾಲೂಕಿನಲ್ಲಿ ಪಶ್ಚಿಮದಿಂದ ಉತ್ತರಕ್ಕೆ ಹರಿಯುತ್ತದೆ. ಉತ್ತರ ಭಾಗದ ಭೂಮಿ ಉಸುಬುಳ್ಳದ್ದು, ಕೆಂಪು; ದಕ್ಷಿಣ ಭಾಗದಲ್ಲಿ ಮೇಲಾದ ಕರೆ ಭೂಮಿಯುಂಟು.

ಬೇಸಿಗೆಯಲ್ಲಿ ಶಕೆ ಬಹಳ; ಉಳಿದ ಕಾಲದಲ್ಲಿ ಹಿತಕಾರಕವಾದ ತಂಪು ಹವೆ ಇರುವದು. ಪಶ್ಚಿಮ ದಕ್ಷಿಣ ಭಾಗಗಳಲ್ಲಿ ಮಳೆ ನೆಟ್ಟಗಾಗುತ್ತದೆ. ಉಳಿದ ಕಡೆಯಲ್ಲಿ ಅನಿ

ಯಮಿತ, ಕಡಿಮೆ; ೧೩ರಿಂದ ೪೧ ಇಂಚಿನ ವರೆಗೆ, ಸರಾಸರೀ ೨೩ ಇಂಚು. ಮಲಾಪಹಾರಿಯ ಹೊರ್ತು ನೀರಿನ ಆಸರವು ಸ್ಥಿರವಾದದ್ದು ಯಾವದೂ ಇಲ್ಲ. ಸರುವುಗಳು ಬೇಸಿಗೆಯಲ್ಲಿ ಹರಿಗಡಿಯುತ್ತವೆ. ಕೆರೆ ಬಾವಿಗಳು ಬತ್ತುತ್ತವೆ: ಆದ್ದರಿಂದ ಆಗ ನೀರಿನ ತಾಪತ್ರಯ ಬಹಳಾಗುತ್ತದೆ.

**ಹವೆ, ಮಳೆ, ನೀರು.**

ಒಟ್ಟು ಜನಸಂಖ್ಯೆದಲ್ಲಿ ಶೇಕಡಾ ೯೩·೦೩ ಹಿಂದೂ ಜನರು, ೬·೯೫ ಮುಸಲ್ಮಾನರು. ಹಿಂದೂಗಳಲ್ಲಿ ಬ್ರಾಹ್ಮಣರು ೨೬೧೬, ಜೈನರು ೧೦೨೩, ರಡ್ಡೇರು ೧೯೪೩, ಉಪ್ಪಾರರು ೨೫೪೨, ಪಂಚಾಳರು ೧೭೭೧, ಗಾಣಿಗರು ೧೩೬೩, ನೇಕಾರರು ೨೩೩೨, ಲಿಂಗವಂತರು ೩೧೯೦೫, ಕುರುಬರು ೧೨೬೮೧, ಕಬ್ಬಲಗೇರು ೧೯೩೯, ಬೇಡರು ೬೭೦೮, ಮಾದಿಗರು ೨೬೮೭, ಹೊಲಿಯರು ೧೩೬೫, ಇತ್ಯಾದಿ.

**ಜನರು.**

ಸಂಪಗಾವೀ ತಾಲೂಕು.—ಜಿಲ್ಲೆಯ ದಕ್ಷಿಣದಲ್ಲಿ ಗೋಕಾವೀ ತಾಲೂಕಿನ ದಕ್ಷಿಣಕ್ಕೆ. ಸರಕಾರೀ ಹಳ್ಳಿಗಳು ೧೩೯, ದುಮಾಲೀ ೧. ಕ್ಷೇತ್ರ ೪೨೪ ಚ. ಮೈಲು, ಜನಸಂಖ್ಯೆ ೧೧೯೮೪೩, ಭೂಮಿಯ ಕಂದಾಯ ೨೩೯೧೩೦ ರೂಪಾಯಿ.

**ಕ್ಷೇತ್ರ.**

ಪಶ್ಚಿಮದಲ್ಲಿ ಗುಡ್ಡಗಳು ಬಹಳ; ಅವು ಪೂರ್ವಕ್ಕೆ ಕ್ರಮವಾಗಿ ಕಡಿಮೆಯಾಗುತ್ತ ಹೋಗಿ ಮೇಲಾದ ಕರೆ ಭೂಮಿ ಬರುತ್ತದೆ. ದಕ್ಷಿಣದಲ್ಲಿಯೂ ಗುಡ್ಡಗಳೂ ತಗ್ಗು ದಿನ್ನೆಗಳೂ ಬಹಳ; ನೈರುತ್ಯದಲ್ಲಿ ದೊಡ್ಡ ಮರಗಳ ಅಡವಿಯುಂಟು. ಭೂಮಿಯು ಗುಡ್ಡಗಳಿದ್ದಲ್ಲಿ ಬಹುತರ ಕೆಂಪು, ಉಳಿದ ಕಡೆಯಲ್ಲೆಲ್ಲ ಯೆರೆ.

**ಸ್ವರೂಪ, ಭೂಮಿ.**

ಹವೆಯು ವಾಡಿಕೆಯಾಗಿ ಆರೋಗ್ಯದ್ದು. ಪಶ್ಚಿಮ ದಕ್ಷಿಣ ಭಾಗದಲ್ಲಿ ಮಳೆ ಬಹಳಾಗುವ ಕಾರಣ ಚಳಿಗಾಲದಲ್ಲಿ ಜ್ವರ ಬರುತ್ತದೆ. ಸಂಪಗಾವಿಯಲ್ಲಿ ಮಳೆ ೧೫ರಿಂದ ೩೮ ಇಂಚಿನ ವರೆಗೆ, ಸರಾಸರೀ ೨೯ ಇಂಚು. ಮಲಾಪಹಾರಿಯು ಈ ತಾಲೂಕಿನೊಳಗಿಂದ ಹರಿಯುತ್ತಿದ್ದಲ್ಲಿ ನೀರಿನ ಕೊರತೆ ಇಲ್ಲ. ಸರುವುಗಳೂ ಕೆರೆ ಬಾವಿಗಳೂ ತಕ್ಕಮಟ್ಟಿಗೆ ನೀರು ಪೂರೈಸುತ್ತವೆ.

**ಹವೆ, ಮಳೆ, ನೀರು.**

ಒಟ್ಟು ಜನಸಂಖ್ಯೆದಲ್ಲಿ ಶೇಕಡಾ ೯೧·೫೧ ಹಿಂದೂ ಜನರು, ೮·೩೬ ಮುಸಲ್ಮಾನರು. ಹಿಂದೂಗಳಲ್ಲಿ ಬ್ರಾಹ್ಮಣರು ೨೦೩೧, ಜೈನರು ೩೧೬೧, ಆರೇರು ೬೦೨೩, ಛತ್ರೇರು ೩೧೯೮, ಜೇಡರು ೫೦೫೬, ಪಂಚಾಳರು ೨೩೪೩, ಲಿಂಗವಂತರು ೫೦೭೩೧, ಕುರುಬರು ೧೧೧೭೦, ಕಬ್ಬಲಿಗೇರು ೨೯೯೬, ಬೇಡರು ೭೪೩೫, ಮಾದಿಗರು ೩೨೦೭, ಹೊಲಿಯರು ೨೭೧೮, ಇತ್ಯಾದಿ.

**ಜನರು.**

ಬೆಳಗಾವಿಯ ತಾಲೂಕು.—ಜಿಲ್ಲೆಯ ಪಶ್ಚಿಮ ಭಾಗದಲ್ಲಿ ಕೊಲ್ಲಾಪುರ ಇಲಾಖೆಯ ದಕ್ಷಿಣಕ್ಕೆ. ಸರಕಾರೀ ಹಳ್ಳಿಗಳು ೧೨೨, ದುಮಾಲೀ ೮೧. ಕ್ಷೇತ್ರ ೬೬೩ ಚ. ಮೈಲು, ಜನಸಂಖ್ಯೆ ೧೨೮೪೭೭, ಭೂಮಿಯ ಕಂದಾಯ ೧೫೦೪೧೦ ರೂಪಾಯಿ.

**ಕ್ಷೇತ್ರ.**

**ಸ್ವರೂಪ, ಭೂಮಿ.**

ಪಶ್ಚಿಮದಲ್ಲಿ ಸಹ್ಯಾದ್ರಿಯ ನೆತ್ತಿಯ ವರೆಗೆ ಈ ತಾಲೂಕು ಹೋಗಿಯುತ್ತದೆ. ಅಲ್ಲಿ ಗುಡ್ಡಗಳು ಬಹಳ; ಅವುಗಳ ಬುಡದಲ್ಲಿ ಪೊಕ್ಕಲತನಕ್ಕೆ ಬರುವಂಥ ಬೆಳೆಯುಳ್ಳ ಭೂಮಿಯು ಅಲ್ಲಲ್ಲಿಗೆ ಇರುತ್ತದೆ. ಆಗ್ನೇಯ ದಿಕ್ಕಿನ ಭೂಮಿಯು ತಕ್ಕಮಟ್ಟಿಗೆ ಸವನೆಲದುಂಟು. ಮಲಾಪಹಾರಿ, ಮಾರ್ಕಂಡೆಯಿ, ಯೆಂಬ ಹೊಳೆಗಳ ಥಡದ ಭೂಮಿಯು ಬೆಳೆಯುಳ್ಳದ್ದುಂಟು. ಪೂರ್ವ ದಕ್ಷಿಣಗಳ ಭೂಮಿ ಮುಖ್ಯವಾಗಿ ಯೆರೆ, ಪಶ್ಚಿಮ ಉತ್ತರಗಳ ಭೂಮಿಯು ಮುಖ್ಯವಾಗಿ ಕೆಂಪು ಬಡ ಭೂಮಿಯು. ಗುಡ್ಡಗಳ ಪ್ರದೇಶಗಳಲ್ಲಿ ಕುಮ್ರೀ ಪೈರು ಮಾತ್ರ ಬರುತ್ತದೆ.

**ಹವೆ, ಮಳೆ, ನೀರು.**

ಪಶ್ಚಿಮ ಭಾಗದ ಹವೆ ಶೀತ; ಮಳೆಗಾಲದಲ್ಲಿಯೂ ಚಳಿಗಾಲದಲ್ಲಿಯೂ ಜ್ವರ ಬರುವದು. ಪೂರ್ವ ಭಾಗದ ಹವೆಯು ಅಷ್ಟು ಶೈತ್ಯವುಳ್ಳದ್ದಲ್ಲ; ಅಲ್ಲಿ ಜ್ವರೋಪದ್ರವ ಕಡಿಮೆ. ಪಶ್ಚಿಮದಲ್ಲಿ ಮಳೆ ಬಹಳ, ಪೂರ್ವದಲ್ಲಿ ಕಡಿಮೆ. ಬೆಳಗಾವಿಯಲ್ಲಿ ೩೩ರಿಂದ ೭೧ ಇಂಚಿನ ವರೆಗೆ, ಸರಾಸರೀ ೫೦ ಇಂಚು. ಸಣ್ಣ ಸಣ್ಣ ಸರುವುಗಳಲ್ಲಿಯೂ ಕೆರೆ ಬಾವಿಗಳಲ್ಲಿಯೂ ಕುಡಿಯುವ ನೀರು ವಿಪುಲವಾಗಿ ದೊರಿಯುತ್ತದೆ.

**ಜನರು.**

ಒಟ್ಟು ಜನಸಂಖ್ಯದಲ್ಲಿ ಶೇಕಡಾ ೮೮·೪೩ ಹಿಂದೂ ಜನರು, ೯·೬೭ ಮುಸಲ್ಮಾನರು, ೧·೭೭ ಕ್ರಿಸ್ತಿಯನ್ನರು. ಹಿಂದೂ ಜನರಲ್ಲಿ ಬ್ರಾಹ್ಮಣರು ೬೦೩೧, ಜೈನರು ೨೭೮, ಆರೇರು ೪೯೪೮೦, ಕುಣಬಿಗಳು ೪೮೩೬, ತಿಳಾರಿಗಳು ೨೫೪, ಹಣಬರು ೨೩೦, ನೇಕಾರರು ೧೯೧೫, ಪಂಚಾಳರು ೧೧೦೯, ಲಿಂಗವಂತರು ೧೩೨೦೯, ಕುರುಬರು ೧೬೪೦, ಬೇಡರು ೫೩೪೬, ಹೊಲಿಯರು ೬೭೦೭ ಇತ್ಯಾದಿ.

**ಕ್ಷೇತ್ರ.**

ಖಾನಾಪುರ ತಾಲೂಕು.—ಜಿಲ್ಲೆಯ ನೈರುತ್ಯ ಮೂಲೆಯಲ್ಲಿ ಬೆಳಗಾವೀ ತಾಲೂಕಿನ ದಕ್ಷಿಣಕ್ಕೆ. ಸರಕಾರೀ ಹಳ್ಳಿಗಳು ೨೧೫, ದುಮಾಲೀ ೨೫. ಕ್ಷೇತ್ರ ೬೩೩ ಚ. ಮೈಲು, ಜನಸಂಖ್ಯೆ ೭೯೨೬೪, ಭೂಮಿಯ ಕಂದಾಯ ೧೧೩೦೪೦ ರೂಪಾಯಿ.

**ಸ್ವರೂಪ, ಭೂಮಿ.**

ದಕ್ಷಿಣ ಭಾಗದಲ್ಲಿಯೂ ನೈರುತ್ಯದಲ್ಲಿಯೂ ಗುಡ್ಡಗಳೂ ಅಡವಿಯೂ ಬಹಳ, ಜನರ ವಸ್ತಿ ಕಡಿಮೆ. ಜಾಂಬೋಟಿಯ ಬಳಿಯಲ್ಲಿ ಗುಡ್ಡಗಳು ಯೆತ್ತರ ಉಂಟು. ಈಶಾನ್ಯದಲ್ಲಿಯೂ ಪೂರ್ವದಲ್ಲಿಯೂ ಮಲಾಪಹಾರಿಯ ಯೆಡ ಬಲದಲ್ಲಿಯೂ ಭೂಮಿಯು ತಕ್ಕಮಟ್ಟಿಗೆ ಸವನೆಲದ್ದುಂಟು; ಅಲ್ಲಿ ಜನರ ವಸ್ತಿಯಾದರೂ ಹೆಚ್ಚು ಇರುವದು. ಪೂರ್ವ ಭಾಗದಲ್ಲಿ ಮಾತ್ರ ಸ್ವಲ್ಪ ಬಡ ಯೆರೆ ನೆಲವನ್ನು ಕಾಣ ಬಹುದು; ಉಳಿದದ್ದೆಲ್ಲ ಕೆಂಪು, ಇಲ್ಲವೇ ಕಲ್ಲು.

ಹವೆಯು ಬೇಸಿಗೆಯಲ್ಲಿ ಹಿತಕಾರಕ, ಚಳಿಗಾಲದಲ್ಲಿ ರೋಗಕಾರಕ. ಖಾನಾಪುರದಲ್ಲಿ ಮಳೆಯು ೪೬ರಿಂದ ೭೭ ಇಂಚಿನ ವರೆಗೆ, ಸರಾಸರೀ ೬೩ ಇಂಚು. ಉತ್ತರದಲ್ಲಿ

ಮಲಾಪಹಾರಿಯೂ ಅದಕ್ಕೆ ಕೂಡುವ ಸರುವುಗಳೂ ನೀರು ಪೂರೈಸುತ್ತವೆ. ಪೂರ್ವ ಭಾಗದಲ್ಲಿ ಮಾತ್ರ ನೀರಿನ ಆಶ್ರಯವು ಸ್ವಲ್ಪ ಕಡಿಮೆ; ಕೆರೆ ಬಾವಿಗಳ ನೀರು ಅರೋಗ್ಯದ್ದಲ್ಲ.

**ಹವೆ, ಮಳೆ, ನೀರು.**

ಒಟ್ಟು ಜನಸಂಖ್ಯೆದಲ್ಲಿ ಶೇಕಡಾ ೯೦·೬೫ ಹಿಂದೂ ಜನರು, ೬·೦೭ ಮುಸಲ್ಮಾನರು, ೩·೨೬ ಕ್ರಿಸ್ತಿಯನ್ನರು. ಹಿಂದೂ ಜನರಲ್ಲಿ ಬ್ರಾಹ್ಮಣರು ೨೬೯೨, ಜೈನರು ೨೩೧೨, ಸಾರ್ವೇಕರರು ೧೧೬೧, ಕುಣಬಿಗಳು ೨೮೫೨೩, ಆರೇರು ೮೬೬೬, ಹಣಬರು ೨೦೨೯, ಲಿಂಗವಂತರು ೮೯೪೪, ಕುರುಬರು ೧೩೬೧, ಬೇಡರು ೧೯೧೬, ಹೊಲಿಯರು ೩೬೧೨, ಇತ್ಯಾದಿ.

**ಜನರು.**

# ವಿಜಾಪುರ ಜಿಲ್ಲೆ.

ಬಾದಾವೀ ತಾಲೂಕು.—ಜಿಲ್ಲೆಯ ಆಗ್ನೇಯದಲ್ಲಿ ಬಾಗಲಕೋಟೆಯ ತಾಲೂಕಿನ ದಕ್ಷಿಣಕ್ಕೆ. ಸರಕಾರೀ ಹಳ್ಳಿಗಳು ೧೭೩, ದುಮಾಲೀ ೬೩. ಕ್ಷೇತ್ರ ೬೭೬ ಚ. ಮೈಲು, ಜನಸಂಖ್ಯೆ ೮೯೦೪೭; ಭೂಮಿಯ ತೆರಿಗೆ ೧೦೨೯೧೦ ರೂಪಾಯಿ.

**ಕ್ಷೇತ್ರ.**

ನೈರುತ್ಯ ಮೂಲೆಯಲ್ಲಿ ಭೂಮಿ ಯೆತ್ತರ, ತೆರೆಯಂಥಾದು; ಯೆಲ್ಲ ಕಡೆಯಲ್ಲಿ ಗುಡ್ಡಗಳೂ ಉಸುಬಿನ ಭೂಮಿಯೂ ಬಹಳ. ಭೂಮಿ ಕೆಂಪು, ಇಲ್ಲವೆ ಉಸುಬು; ಯೆರೆ ನೆಲ ಅಪರೂಪ.

**ಸ್ವರೂಪ, ಭೂಮಿ.**

ಹವೆಯು ರೋಗಕಾರಕ, ಶಕೆಯುಳ್ಳದ್ದು. ಬಾದಾವಿಯಲ್ಲಿ ಮಳೆಯು ೧ರಿಂದ ೪೭ ಇಂಚಿನ ವರೆಗೆ, ಸರಾಸರೀ ೨೪ ಇಂಚು. ನೀರು ಸಮೃದ್ಧಿಯಾಗಿರುವದಿಲ್ಲ; ಮಲಾಪಹಾರಿಯಲ್ಲಿ ಸಹ ಬೇಸಿಗೆಯಲ್ಲಿ ನೀರಿನ ಕೊರತೆಯಾಗುತ್ತದೆ. ಸರುವುಗಳೂ ಕೆರೆಗಳೂ ಬಹು ಕಡಿಮೆ, ಅವುಗಳ ನೀರು ಬೇಗ ಬತ್ತುತ್ತದೆ.

**ಹವೆ, ಮಳೆ, ನೀರು.**

ಒಟ್ಟು ಜನಸಂಖ್ಯೆದಲ್ಲಿ ಶೇಕಡಾ ೯೨·೮೪ ಹಿಂದೂ ಜನರು, ೬·೫೬ ಮುಸಲ್ಮಾನರು, ೦·೫೮ ಕ್ರಿಸ್ತಿಗಳು. ಹಿಂದೂಗಳಲ್ಲಿ ಬ್ರಾಹ್ಮಣರು ೨೪೪೨, ಕುರುಬರು ೧೭೧೧೫, ಬೇಡರು ೬೪೫೫, ರಡ್ಡೇರು ೩೫೬೩, ಆರೇರು ೧೭೩೩, ಛತ್ರೇರು ೧೪೧೬, ಪಂಚಾಳರು ೧೨೨೭, ಲಿಂಗವಂತರು ೧೮೩೩೫, ಗಾಣಿಗರು ೩೯೩೫, ಪಡಸಾಳಿಗಳು ೨೦೮೨, ಕುರುವಿನ ಶೆಟ್ಟಿಗಳು ೧೮೬೮, ಹಟಗಾರರು ೩೩೭೭, ಮಾದಿಗರು ೩೨೪೦, ಇತ್ಯಾದಿ.

**ಜನರು.**

**ಕ್ಷೇತ್ರ.**

೭ ಬಾಗಲಕೋಟೆಯ ತಾಲೂಕು.— ದಕ್ಷಿಣ ಭಾಗದ ಮಧ್ಯ ಭಾಗದಲ್ಲಿ ಕೃಷ್ಣೆಯ ದಕ್ಷಿಣಕ್ಕೆ. ಸರಕಾರೀ ಹಳ್ಳಿಗಳು ೧೬೧, ದುಮಾಲೀ ೩೯. ಕ್ಷೇತ್ರ ೬೪೩ ಚ. ಮೈಲು, ಜನಸಂಖ್ಯೆ ೯೬೧೫೬, ಭೂಮಿಯ ಕಂದಾಯ ೧೪೭೭೯೦ ರೂಪಾಯಿ.

**ಸ್ವರೂಪ, ಭೂಮಿ.**

ಈಶಾನ್ಯ ಪೂರ್ವ ಭಾಗಗಳಲ್ಲಿ ಕೃಷ್ಣೆಯ ಯೆಡಬಲದಲ್ಲಿ ಮೇಲಾದ ಯೆರೆ ಭೂಮಿಯ ಬೈಲು ಇರುತ್ತದೆ; ಆದರೂ ಆ ಪ್ರದೇಶದಲ್ಲಿ ಅಲ್ಪ ಸ್ವಲ್ಪ ಗುಡ್ಡಗಳಿವೆ. ಬಹುತರಯೆಲ್ಲ ಕಡೆಯಲ್ಲಿ ಇದೇ ಪ್ರಕಾರದ ಸ್ವರೂಪವಿರುತ್ತದೆ. ಭೂಮಿಯು ವಾಡಿಕೆಯಾಗಿ ಮೇಲಾದ ಯೆರೆ; ಗುಡ್ಡಗಳ ನೆರೆಯಲ್ಲಿ ಕೆಂಪು ಭೂಮಿಯನ್ನು ಕಾಣ ಬಹುದು.

**ಹವೆ, ಮಳೆ, ನೀರು.**

ಹವೆಯು ಬಹಳ ಆರೋಗ್ಯದ್ದು. ಮಳೆಯು ಗುಡ್ಡ ಹೊಳೆಗಳ ನೆರೆಯಲ್ಲಿ ಹೆಚ್ಚು, ಬೇರೆ ಕಡೆಯಲ್ಲಿ ಕಡಿಮೆ; ಬಾಗಲಕೋಟೆಯಲ್ಲಿ ೨ರಿಂದ ೪೦ ಇಂಚಿನ ವರೆಗೆ, ಸರಾಸರೀ ೨೨ ಇಂಚು. ಬಾಗಲಕೋಟೆಯ ಪೂರ್ವಕ್ಕೆ ಯೆರೆ ಭೂಮಿಯ ನಾಡಿನಲ್ಲಿ ನೀರು ದುರ್ಮಿಳ. ಘಟಪ್ರಭಾ, ಕೃಷ್ಣಾ, ಇವೆರಡೇ ನೀರಿನ ಮುಖ್ಯ ಆಶ್ರಯವು. ಈ ಹೊಳೆಗಳ ಧಡದಲ್ಲಿಯೇ ಹಳ್ಳಿಗಳು ಬಹಳ.

**ಜನರು.**

ಒಟ್ಟು ಜನಸಂಖ್ಯದಲ್ಲಿ ಶೇಕಡಾ ೮೯·೨೨ ಹಿಂದೂ ಜನರು, ೧೦·೭೦ ಮುಸಲ್ಮಾನರು. ಹಿಂದೂ ಜನರಲ್ಲಿ ಬ್ರಾಹ್ಮಣರು ೪೩೬೧, ಕುರುಬರು ೧೫೬೨೧, ರಡ್ಡೇರು ೬೭೪೩, ಬೇಡರು ೫೫೫೪, ಆರೇರು ೨೭೬೩, ಛತ್ರೇರು ೨೪೨೮, ಪಂಚಾಳರು ೧೩೪೭, ಕಬ್ಬಲಿಗೇರು ೧೧೩೦, ಲಿಂಗವಂತರು ೧೭೭೦೭, ಗಾಣಿಗರು ೭೩೯೪, ಹೊಲಿಯರು ೨೪೫೧, ಮಾದಿಗರು ೪೭೩೪, ಇತ್ಯಾದಿ.

**ಕ್ಷೇತ್ರ.**

೮ ಬಾಗೇವಾಡೀ ತಾಲೂಕು.-- ಜಿಲ್ಲೆಯ ಮಧ್ಯ ಭಾಗದಲ್ಲಿ ವಿಜಾಪುರ ತಾಲೂಕಿನ ದಕ್ಷಿಣಕ್ಕೆ. ಸರಕಾರೀ ಹಳ್ಳಿಗಳು ೧೧೭, ದುಮಾಲೀ ೯. ಕ್ಷೇತ್ರ ೭೬೪ ಚ. ಮೈಲು, ಜನಸಂಖ್ಯೆ ೮೬೭೪೩, ಭೂಮಿಯ ಕಂದಾಯ ೨೦೦೩೩೦ ರೂಪಾಯಿ.

**ಸ್ವರೂಪ, ಭೂಮಿ.**

ಉತ್ತರದಲ್ಲಿ ಡೋಣಿಯ ಯೆಡಬಲದಲ್ಲಿ ಮೇಲಾದ ಭೂಮಿಯುಂಟು. ಆದರೆ ಮಧ್ಯ ಪಶ್ಚಿಮ ಭಾಗಗಳಲ್ಲಿ ಗರಸಿನ ನೆಲವೇ ಬಹಳ. ಮರಗಳು ಬಹುತರ ಯೆಲ್ಲಿಯೂ ಇಲ್ಲ.

**ಹವೆ, ಮಳೆ, ನೀರು.**

ಹವೆಯು ಬಹುತರ ವಿಜಾಪುರದ ಹಾಗೇ ಇರುತ್ತದೆ. ಚಳಿಗಾಲದಲ್ಲಿ ಪೂರ್ವದ ಗಾಳಿಯೂ, ಬೇಸಿಗೆಯಲ್ಲಿ ಉಗ್ರವಾದ ಬಿರುಗಾಳಿಯೂ ವಿಜಾಪುರದಂತೆಯೇ ಬಿಡುತ್ತದೆ. ಬಾಗೇವಾಡಿಯಲ್ಲಿ ಮಳೆ ೧೫ರಿಂದ ೩೯ ಇಂಚಿನ ವರೆಗೆ, ಸರಾಸರೀ ೨೮ ಇಂಚು. ನೀರು ತಕ್ಕಷ್ಟು ಇಲ್ಲ. ಡೋಣಿಗೂ ಕೃಷ್ಣೆಗೂ ಕೂಡುವ ಕೆಲವು ಸರುವುಗಳು ಮಳೆಗಾಲದಲ್ಲಿ ಹರಿಯುತ್ತವೆ; ಕೆರೆಗಳು ಬಹು ಕಡಿಮೆ; ಊರೂರಿಗೆ ಬಾವಿಗಳು ಮಾತ್ರ ಇರುತ್ತವೆ.

**ಜನರು.** ಒಟ್ಟು ಜನಸಂಖ್ಯೆಯಲ್ಲಿ ಶೇಕಡಾ ೮೨·೮೧ ಹಿಂದೂ ಜನರು, ೧೨·೧೮, ಮುಸಲ್ಮಾನರು. ಹಿಂದೂ ಜನರಲ್ಲಿ ಬ್ರಾಹ್ಮಣರು ೨೧೭೮, ಕುರುಬರು ೯೬೪೨, ರಡ್ಡೇರು ೪೧೮೭, ಕಬ್ಬಲಿಗೇರು ೩೧೭೭, ಆರೇರು ೨೮೧೨, ಬೇಡರು ೧೮೯೩, ವೊಡ್ಡರು ೧೩೨೫, ಹಟಗಾರರು ೧೫೭೦, ಮಾದಿಗರು ೪೦೩೧, ಹೊಲಿಯರು ೩೫೧೦, ಇತ್ಯಾದಿ.

**ಕ್ಷೇತ್ರ.** ವಿಜಾಪುರ ತಾಲೂಕು.—ಜಿಲ್ಲೆಯ ವಾಯವ್ಯ ಭಾಗದ ಮಧ್ಯದಲ್ಲಿ ಇಂಡೀ ತಾಲೂಕಿನ ದಕ್ಷಿಣಕ್ಕೆ. ಸರಕಾರೀ ಹಳ್ಳಿಗಳು ೯೮, ದುಮಾಲೀ ೧೦. ಕ್ಷೇತ್ರ ೮೬೯ ಚ. ಮೈಲು, ಜನಸಂಖ್ಯೆ ೭೬೮೯೬, ಭೂಮಿಯ ಕಂದಾಯ ೧೨೫೮೭೦ ರೂಪಾಯಿ.

**ಸ್ವರೂಪ, ಭೂಮಿ.** ಡೋಣಿಯ ಯೆಡಬಲದಲ್ಲಿ ಬಹು ಬೆಳೆಯುಳ್ಳ ಯೆರೆ ಭೂಮಿಯುಂಟು; ಹಳ್ಳಿಗಳು ದೂರ ದೂರ. ಉತ್ತರ ವಾಯವ್ಯಗಳಲ್ಲಿ ಗರಸಿನ ಭೂಮಿ; ವೃಕ್ಷಗಳು ಯೆಲ್ಲಿಯೂ ಇಲ್ಲ. ಡೋಣಿಯ ಪ್ರದೇಶ ಹೊರ್ತಾಗಿ ಯೆಲ್ಲ ಕಡೆಯಲ್ಲಿ ತೆರೆಯಂಥ ತಗ್ಗು ಮಿಟ್ಟೆಗಳನ್ನು ಕಾಣ ಬಹುದು; ಮಿಟ್ಟೆಗಳು ಕೆಂಪು, ತಗ್ಗುಗಳು ಯೆರೆ. ಗುಡ್ಡಗಳು ಉತ್ತರದಲ್ಲಿಯೂ ಮಮದಾಪುರದ ಬಳಿಯಲ್ಲಿಯೂ ಮಾತ್ರ ಸ್ವಲ್ಪ ಉಂಟು.

**ಹವೆ, ಮಳೆ, ನೀರು.** ಹವೆಯು ವೊಟ್ಟಿನಲ್ಲಿ ಆರೋಗ್ಯದ್ದಿರುತ್ತದೆ. ಚಳಿಗಾಲದಲ್ಲಿ ಪೂರ್ವದ ಗಾಳಿಯಿಂದ ಚಳಿ ಬಹಳಾಗುತ್ತದೆ. ಬೇಸಿಗೆಯಲ್ಲಿ ಶಕೆ ಬಹಳ. ವಿಜಾಪುರದಲ್ಲಿ ಮಳೆ ೫ರಿಂದ ೪೫ ಇಂಚಿನ ವರೆಗೆ, ಸರಾಸರೀ ೨೪ ಇಂಚು. ನೀರಿನ ಕೊರತೆಯು ಬಾಗೇವಾಡೀ ತಾಲೂಕಿನಂತೆ.

**ಜನರು.** ಒಟ್ಟು ಜನಸಂಖ್ಯೆಯಲ್ಲಿ ಶೇಕಡಾ ೮೭·೪೧ ಹಿಂದೂ ಜನರು, ೧೨·೫೪ ಮುಸಲ್ಮಾನರು. ಹಿಂದೂಗಳಲ್ಲಿ ಬ್ರಾಹ್ಮಣರು ೨೭೮೦, ಕುರುಬರು ೮೮೩೮, ಆರೇರು ೩೯೬೪, ಕಬ್ಬಲಿಗೇರು ೨೨೦೮, ರಡ್ಡೇರು ೧೪೨೯, ರಜಪೂತರು ೧೦೬೪, ವೊಡ್ಡರು ೧೩೩೫, ಕೊರವರು ೧೨೫೫, ಲಿಂಗವಂತರು ೧೭೯೮೨, ಗಾಣಿಗರು ೪೮೪೦, ಮಾದಿಗರು ೧೯೦೫, ಹೊಲಿಯರು ೩೯೭೭, ಇತ್ಯಾದಿ.

**ಕ್ಷೇತ್ರ.** ಹುನಗುಂದ ತಾಲೂಕು.—ಜಿಲ್ಲೆಯ ಆಗ್ನೇಯದಲ್ಲಿ ಕೃಷ್ಣೆಯ ದಕ್ಷಿಣಕ್ಕೆ. ಸರಕಾರೀ ಹಳ್ಳಿಗಳು ೧೯೨, ದುಮಾಲೀ ೨೫, ಕ್ಷೇತ್ರ ೫೧೮ ಚ. ಮೈಲು, ಜನಸಂಖ್ಯೆ ೮೦೦೩೭, ಭೂಮಿಯ ಕಂದಾಯ ೧೨೧೦೫೦ ರೂಪಾಯಿ.

**ಸ್ವರೂಪ, ಭೂಮಿ.** ಪಶ್ಚಿಮ ಭಾಗದಲ್ಲಿ ಮಾತ್ರ ಸ್ವಲ್ಪ ಗುಡ್ಡಗಳಿವೆ; ಉಳಿದದ್ದೆಲ್ಲ ವಾಡಿಕೆಯಾಗಿ ಬೆಳೆಯುಳ್ಳ ಯೆರೆ ಭೂಮಿಯ ಬೈಲು. ದಕ್ಷಿಣದಲ್ಲಿಯೂ ಸ್ವಲ್ಪ ಉಸುಬಿನ ಕಲ್ಲಿನ ಗುಡ್ಡಗಳುಂಟು. ಕೆಲವು ಕಡೆಯಲ್ಲಿ ಬೆಳೆ ಬರುವಂಥ ಭೂಮಿಯಲ್ಲಿ ಕಿರಿ ಅಡವಿ ಬೆಳೆದದೆ.

ಬೇಸಿಗೆಯಲ್ಲಿ ಶಕೆ ಅತಿಶಯ; ಉಳಿದ ಕಾಲದಲ್ಲಿ ಹವೆಯು ಅತ್ಯುತ್ತಮವಾದದ್ದು. ನೈರುತ್ಯದಲ್ಲಿ ಮಳೆ ಅನಿಯಮಿತ. ಹುನಗುಂದದಲ್ಲಿ ೮ರಿಂದ ೪೧ ಇಂಚಿನ ವರೆಗೆ, ಸರಾಸರೀ ೨೩ ಇಂಚು. ಉತ್ತರ ಮೇರೆಯಲ್ಲಿ ಕೃಷ್ಣೆ, ಪಶ್ಚಿಮ ಮೇರೆಯಲ್ಲಿ ಮಲಾಪಹಾರಿ ಅಲ್ಲದೆ ಹನ್ನೆರಡು ತಿಂಗಳೂ ಹರಿಯುವ ಸರುವುಗಳು ಹಲವುಂಟು. ಆದ್ದರಿಂದ ನೀರಿನ ಸಮೃದ್ಧಿ ಇರುತ್ತದೆ.

**ಹವೆ, ಮಳೆ, ನೀರು.**

ಒಟ್ಟು ಜನಸಂಖ್ಯೆಯಲ್ಲಿ ಹಿಂದೂ ಜನರು ಶೇಕಡಾ ೯೧·೬೪, ಮುಸಲ್ಮಾನರು ೮·೩೩. ಹಿಂದೂಗಳಲ್ಲಿ ಬ್ರಾಹ್ಮಣರು ೧೯೧೦, ಕುರುಬರು ೧೩೬೪೩, ರಡ್ಡೇರು ೪೨೬೫, ಬೇಡರು ೩೪೪೧, ಪಂಚಾಳರು ೧೦೮೪, ಕಬ್ಬಲಿಗೇರು ೧೦೩೬, ವೊಡ್ಡರು ೧೩೩೫, ಲಿಂಗವಂತರು ೧೫೦೯೫, ಗಾಣಿಗರು ೪೦೫೮, ಆರೇಬಣಜಿಗರು ೨೯೭೭, ಜೇಡರು ೧೨೩೨, ಮಾದಿಗರು ೩೭೫೬, ಹೊಲಿಯರು ೨೦೦೧, ಇತ್ಯಾದಿ.

**ಜನರು.**

ಇಂಡೀ ತಾಲೂಕು.—ಜಿಲ್ಲೆಯ ಉತ್ತರದಲ್ಲಿ ಭೀಮೆಯ ದಕ್ಷಿಣಕ್ಕೆ. ಸರಕಾರೀ ಹಳ್ಳಿಗಳು ೧೧೮, ದುಮಾಲೀ ೧೮. ಕ್ಷೇತ್ರ ೮೭೧ ಚ. ಮೈಲು, ಜನಸಂಖ್ಯೆ ೭೧೯೪೦. ಭೂಮಿಯ ಕಂದಾಯ ೧೭೪೩೧೦ ರೂಪಾಯಿ.

**ಕ್ಷೇತ್ರ.**

ಭೂಮಿ ಬೈಲಾದದ್ದು, ವೃಕ್ಷಗಳಿಲ್ಲ; ದಕ್ಷಿಣ ಭಾಗದಲ್ಲಿ ಮಾತ್ರ ಸ್ವಲ್ಪ ಗುಡ್ಡಗಳಿವೆ. ಭೀಮಾ ತೀರದ ಪ್ರದೇಶವು ಬಹು ಬೆಳೆಯುಳ್ಳದ್ದು. ಆದರೆ ದಕ್ಷಿಣ ಭಾಗದಲ್ಲಿ ವಸ್ತಿಯು ಹೆಚ್ಚು ದಟ್ಟವಾಗಿರುತ್ತದೆ. ಯೆಲ್ಲ ಕಡೆಯಲ್ಲಿ ವಾಡಿಕೆಯಾಗಿ ಯೆರೆ ಭೂಮಿ, ದಿನ್ನೆಗಳಲ್ಲಿ ಮಾತ್ರ ಗರಸು. ಕಬ್ಬು, ಬಾಳೆಗಳ ತೋಟಗಳು ಕೆಲವುಂಟು.

**ಸ್ವರೂಪ, ಭೂಮಿ.**

ಹವೆಯು ಅತ್ಯುಷ್ಣ; ಏಪ್ರಿಲ, ಮೇ ತಿಂಗಳುಗಳಲ್ಲಿ ಶಕೆಯು ೧೦೮ ಅಂಶದ ವರೆಗೆ ಇರುತ್ತದೆ. ಬೇಸಿಗೆಯಲ್ಲಿ ಶಕೆಯಿಂದ, ಮಳೆಗಾಲದಲ್ಲಿ ಶೈತ್ಯದಿಂದ, ಜ್ವರ ಬರುವದು. ಚಳಿಗಾಲದ ಹವೆ ಆರೋಗ್ಯದ್ದು. ಮಳೆಯು ಉತ್ತರದಲ್ಲಿ ಅನಿಯಮಿತ; ಇಂಡಿಯಲ್ಲಿ ೪ರಿಂದ ೪೫ ಇಂಚಿನ ವರೆಗೆ, ಸರಾಸರೀ ೨೩ ಇಂಚು. ನೀರಿಗೆ ಕೊರತೆ ಇಲ್ಲ. ಭೀಮೆಗೆ ಕೂಡುವ ಸರುವುಗಳು ಹನ್ನೆರಡು ತಿಂಗಳೂ ಹರಿಯುತ್ತವೆ. ಸರುವುಗಳಿಲ್ಲದಲ್ಲಿ ಬಾವಿಗಳ ನೀರು ತಕ್ಕಮಟ್ಟಿಗೆ ಪೂರೈಸುತ್ತದೆ.

**ಹವೆ, ಮಳೆ, ನೀರು.**

ಒಟ್ಟು ಜನಸಂಖ್ಯೆಯಲ್ಲಿ ಹಿಂದೂ ಜನರು ಶೇಕಡಾ ೮೯·೪೯, ಮುಸಲ್ಮಾನರು ೧೦·೪೭. ಹಿಂದೂ ಜನರಲ್ಲಿ ಬ್ರಾಹ್ಮಣರು ೨೯೮೨, ಕುರುಬರು ೯೬೭೬, ಕಬ್ಬಲಿಗೇರು ೨೯೫೯, ಆರೇರು ೨೮೭೨, ಉಪ್ಪಾರರು ೨೪೪೩, ವೊಡ್ಡರು ೧೩೪೯, ಲಿಂಗವಂತರು ೧೮೭೦೪, ಗಾಣಿಗರು ೪೨೫೮, ಕುಡವೊಕ್ಕಲಿ

**ಜನರು.**

ಗರು ೨೩೯೧, ನೇಕಾರರು ೧೬೦೨, ಆರೇ ಬಣಜಿಗರು ೧೪೨೪, ಹಟಗಾರರು ೧೧೫೮, ಸಮ್ಮಗಾರರು ೧೨೪೭, ಮಾದಿಗರು ೧೬೫೪, ಇತ್ಯಾದಿ.

**ಮುದ್ದೇಬಿಹಾಳ ತಾಲೂಕು.**—ಜಿಲ್ಲೆಯ ಆಗ್ನೇಯ ಭಾಗದ ಮಧ್ಯದಲ್ಲಿ ಸಿಂದಗೀ ತಾಲೂಕಿನ ದಕ್ಷಿಣಕ್ಕೆ. ಸರಕಾರೀ ಹಳ್ಳಿಗಳು ೧೨೮, ದುಮಾಲೀ ೩೩. ಕ್ಷೇತ್ರ ೫೬೪ ಚ. ಮೈಲು, ಜನಸಂಖ್ಯೆ ೬೫೦೨೪, ಭೂಮಿಯ ಕಂದಾಯ ೧೪೦೪೮೦ ರೂಪಾಯಿ.

**ಕ್ಷೇತ್ರ.**

**ಸ್ವರೂಪ, ಭೂಮಿ.**

ಉತ್ತರದಲ್ಲಿ ಡೋಣಿಯ ದಂಡೆಯು ಸವನೆಲದ್ದು; ಮಧ್ಯ ಭಾಗದಲ್ಲಿ ಉಸುಬಿನ ಕಲ್ಲು, ಸುಣ್ಣದ ಸೆಲ ಇದ್ದಾಗ್ಯೂ ತಕ್ಕಮಟ್ಟಿಗೆ ಬೆಳೆಯುಳ್ಳದ್ದಿರುತ್ತದೆ. ದಕ್ಷಿಣ ಭಾಗದಲ್ಲಿ ಕೃಷ್ಣಾ ತೀರ ಹೊರ್ತಾಗಿ ಕಲ್ಲಿನ ಹಾಸಿಗೆಗಳೇ ಬಹಳ. ಆಗ ಲಾದ ಗರಸಿನ ಭೂಮಿಗಳೇ ಹೊರ್ತು ಗುಡ್ಡಗಳಿಲ್ಲ. ಡೋಣಿ, ಕೃಷ್ಣಾ, ಇವುಗಳ ನೆರೆ ಭೂಮಿ ಮೇಲಾದ ಯೆರೆ. ಬೇರೆ ಕಡೆಯಲ್ಲಿ ಉಸುಬು, ಇಲ್ಲವೇ ಸುಣ್ಣ ಕೂಡಿದ ಬಡ ನೆಲ, ಇಲ್ಲವೆ ಕಲ್ಲಿನ ಹಾಸಿಗೆ.

**ಹವೆ, ಮಳೆ, ನೀರು.**

ಈ ತಾಲೂಕಿನಲ್ಲಿ ವಿಜಾಪುರ ಬಾಗೇವಾಡಿಗಳಿಗಿಂತ ಜ್ವರ ಹೆಚ್ಚು; ಆದರೆ ತಕೆಯು ಸ್ವಲ್ಪ ಕಡಿಮೆ ಯೆಂದು ಹೇಳ ಬಹುದು. ಮುದ್ದೇಬಿಹಾಳದಲ್ಲಿ ಮಳೆ ೦·೧೦ರಿಂದ ೪೨ ಇಂಚಿನ ವರೆಗೆ, ಸರಾಸರೀ ೨೩ ಇಂಚು. ಉತ್ತರ ಮೇರೆಯಲ್ಲಿ ಡೋಣಿಗೂ, ದಕ್ಷಿಣ ಮೇರೆಯಲ್ಲಿ ಕೃಷ್ಣೆಗೂ ಕೂಡುವ ಸರುವುಗಳು ಚಳಿಗಾಲದ ವರೆಗೆ ಹರಿಯುತ್ತವೆ. ಬೇಸಿಗೆಯಲ್ಲಿ ಬಾವಿಗಳ ನೀರೇ ಮುಖ್ಯ ಆಶ್ರಯ. ಕೆರೆಗಳು ಬಹು ಕಡಿಮೆ.

**ಜನರು.**

ಒಟ್ಟು ಜನಸಂಖ್ಯೆದಲ್ಲಿ ಹಿಂದೂ ಜನರು ಶೇಕಡಾ ೮೮·೯೧, ಮುಸಲ್ಮಾನರು ೧೧·೦೮. ಹಿಂದೂ ಜನರಲ್ಲಿ ಬ್ರಾಹ್ಮಣರು ೧೫೪೪, ಕುರುಬರು ೧೪೨೧೮, ರಡ್ಡೇರು ೬೨೧೬, ಬೇಡರು ೨೭೬೧, ಕಬ್ಬಲಿಗೇರು ೧೨೯೩, ಆರೇರು ೧೦೫೩, ಲಿಂಗವಂತರು ೨೪೮೧೦, ನೇಕಾರರು ೧೩೭೯, ಗಾಣಿಗರು ೧೨೭೭, ಮಾದಿಗರು ೩೩೨೩, ಹೊಲಿಯರು ೨೮೧೨, ಇತ್ಯಾದಿ.

**ಸಿಂದಗೀ ತಾಲೂಕು.**—ಜಿಲ್ಲೆಯ ಈಶಾನ್ಯ ಮೂಲೆಯಲ್ಲಿ ಭೀಮೆಯ ದಕ್ಷಿಣಕ್ಕೆ. ಸರಕಾರೀ ಹಳ್ಳಿಗಳು ೧೩೬, ದುಮಾಲೀ ೧೪. ಕ್ಷೇತ್ರ ೮೧೨ ಚ. ಮೈಲು, ಜನಸಂಖ್ಯೆ ೭೨೬೫೦, ಭೂಮಿಯ ಕಂದಾಯ ೧೮೮೨೩೦ ರೂಪಾಯಿ.

**ಕ್ಷೇತ್ರ.**

**ಸ್ವರೂಪ, ಭೂಮಿ.**

ನೆಲವು ತೆರೆಯಂಥಾದು, ಮರಗಳಿಲ್ಲ; ಪೊಕ್ಕಲತನ ಕಡಿಮೆ. ಆದರೆ ಭೀಮಾ ತೀರದಲ್ಲಿಯೂ ಡೋಣಿಯ ನೆರೆಯಲ್ಲಿಯೂ ಅತ್ಯುತ್ತಮವಾದ ಯೆರೆ ನೆಲ ವುಂಟು. ಗುಡ್ಡಗಳು ಬಹುತರ ಇಲ್ಲ. ಡೋಣಿಯ ದಂಡೆಯಲ್ಲಿ ತೋಟಗಳು ಬಹಳ ಇರುತ್ತವೆ.

ಬೇಸಿಗೆಯಲ್ಲಿ ಶಕೆ ಬಹಳ; ಆದರೆ ದಕ್ಷಿಣದಲ್ಲಿ ಕಡಿಮೆ. ಮಳೆಯು ಯೆಳೆಮೋಲಿಯ ಬಳಿಯಲ್ಲಿ ಮಾತ್ರ ವೊಳಿತಾಗಿ ಬೀಳುತ್ತದೆ, ಸಿಂದಗಿಯಲ್ಲಿ ೧೨ರಿಂದ ೩೪ ಇಂಚಿನ ವರೆಗೆ, ಸರಾಸರೀ ೨೬ ಇಂಚು. ಆದರೂ ಕುಡಿಯುವ ನೀರು ತಕ್ಕಷ್ಟು ದೊರಿಯುವದಿಲ್ಲ. ಬೇಸಿಗೆಯಲ್ಲಿ ಹರಿಯುವ ಹಳ್ಳಗಳು ಯೆರಡು ಮೂರಕ್ಕಿಂತ ಹೆಚ್ಚಿಲ್ಲ. ಬಾವಿಗಳ ತುಟಪುಂಜಿಯ ನೀರೇ ಯೆಲ್ಲ ಕಡೆಯಲ್ಲಿ ಮುಖ್ಯ ಆಶ್ರಯವು.

**ಹವೆ, ಮಳೆ, ನೀರು.**

ಒಟ್ಟು ಜನಸಂಖ್ಯೆದಲ್ಲಿ ಹಿಂದೂ ಜನರು ಶೇಕಡಾ ೮೭·೨೧, ಮುಸಲ್ಮಾನರು ೧೨·೭೮. ಹಿಂದೂ ಜನರಲ್ಲಿ ಬ್ರಾಹ್ಮಣರು ೨೦೦೬, ಕುರುಬರು ೬೬೮೦, ಕಬ್ಬಲಿಗೇರು ೩೦೦೭, ರಡ್ಡೇರು ೨೮೫೬, ವೊಡ್ಡರು ೧೩೫೬, ಲಿಂಗವಂತರು ೨೦೫೭೯, ಕುಡವೊಕ್ಕಲಿಗರು ೧೮೩೪, ಆರೇ ಬಣಜಿಗರು ೧೪೮೯, ಮಾದಿಗರು ೨೫೯೪, ಹೊಲಿಯರು ೪೮೯೩, ಇತ್ಯಾದಿ.

**ಜನರು.**

# ಕಾನಡಾ ಜಿಲ್ಲೆ.

ಕಾರವಾಡ ತಾಲೂಕು.—ಜಿಲ್ಲೆಯ ಈಶಾನ್ಯ ಮೂಲೆಯಲ್ಲಿ ಗೋವೆಯ ಪ್ರಾಂತದ ದಕ್ಷಿಣಕ್ಕೆ. ಸರಕಾರೀ ಹಳ್ಳಿಗಳು ೬೧. ಕ್ಷೇತ್ರ ೨೮೧ ಚ. ಮೈಲು, ಜನಸಂಖ್ಯೆ ೪೭೭೪೨, ಭೂಮಿಯ ಕಂದಾಯ ೧೧೦೭೧೦ ರೂಪಾಯಿ.

**ಕ್ಷೇತ್ರ.**

ಸಮುದ್ರತೀರವು ಈ ತಾಲೂಕಿನಲ್ಲಿ ೧೮ ಮೈಲು ಉದ್ದ ಇರುತ್ತದೆ. ಈ ತೀರದ ಯೆದುರಿಗೆ ದೇವಗಡವೆಂಬ ನಡುಗಡ್ಡೆಯಲ್ಲಿ ದೀಪಸ್ತಂಭವಿರುತ್ತದೆ, ಅಂಜದೀವೆಂಬ ಗಡೆಯಲ್ಲಿ ಪೋರ್ತುಗೀಸರ ವಸ್ತಿಯುಂಟು. ಕಾರವಾಡದ ದಕ್ಷಿಣಕ್ಕೆ ಕಾಳೀ ನದಿಯ ಯೆಡ ಬಲಗಳಲ್ಲಿ ಬೆಳೆಯುಳ್ಳ ಭತ್ತದ ಭೂಮಿಗಳೂ ತೋಟಗಳೂ ಇರುತ್ತವೆ. ಸಮುದ್ರತೀರದಲ್ಲಿ ತೆಂಗಿನ ಬನಗಳೂ ನಡು ನಡುವೆ ಬತ್ತದ ಭೂಮಿಗಳೂ ವುಂಟು. ಪಶ್ಚಿಮದಲ್ಲಿ ಸಹ್ಯಾದ್ರಿಯ ಅಡವಿಯು ಅಂದವಾಗಿ ಕಾಣುತ್ತದೆ. ಬೈಲು ಪ್ರದೇಶಗಳಲ್ಲಿ ಉಸುಬಿನ ಭೂಮಿಯು, ಗುಡ್ಡಗಳ ಬುಡದಲ್ಲಿ ಕಲ್ಲು, ಉಸುಬು; ಕಾಳೀ ನದಿಯ ದಂಡೆಯಲ್ಲಿಯೂ ಸಮುದ್ರತೀರದಲ್ಲಿಯೂ ಗಾಂಜಣಿಯೆಂಬ ಕರೆ ಭೂಮಿಯು ಬೆಳೆಯುಳ್ಳದ್ದುಂಟು.

**ಸ್ವರೂಪ, ಭೂಮಿ.**

ಹವೆಯು ತೇವುಳ್ಳದ್ದಾದರೂ ಉಷ್ಣ, ಸಮುದ್ರದ ಗಾಳಿ ಆರೋಗ್ಯದ್ದು. ಸಮುದ್ರತೀರದಲ್ಲಿ ಚಳಿಯೂ ಜ್ವರವೂ ಬಹುತರ ಇಲ್ಲ, ಗುಡ್ಡಗಳ ನೆರೆಯಲ್ಲಿ ಮಾತ್ರ ಚಳಿಜ್ವರ ಬರ ಬಹುದು. ಕಾರವಾಡದಲ್ಲಿ ಮಳೆಯು ೭೮ರಿಂದ ೧೯೨ ಇಂಚಿನ ವರೆಗೆ, ಸರಾಸರೀ ೧೧೬ ಇಂಚು. ಸಮುದ್ರತೀರದಲ್ಲಿ ಬಾವಿಗಳ ನೀರು ಆರೋಗ್ಯದ್ದು, ವಿಪುಲ. ಬೇರೆ ಕಡೆಯಲ್ಲಿ ಬಾವಿಗಳು ಕಡಿಮೆ,

**ಹವೆ, ಮಳೆ, ನೀರು.**

ಸರುವುಗಳ ಸೌಳು ನೀರೇ ಬಹು ಜನರು ಕುಡಿಯುವರು. ಸಮುದ್ರವು ಯೇರಿದಾಗ ಅದರ ನೀರು ಕಾಳೀ ನದಿಯಲ್ಲಿಯೂ ಬೇರೆ ದೊಡ್ಡ ಸರುವುಗಳಲ್ಲಿಯೂ ಇಪ್ಪತ್ತು ಮೈಲಿನ ವರೆಗೆ ಪೂರ್ವಕ್ಕೆ ಸಾಗಿ ಹೋಗುವದು. ಸಹ್ಯಾದ್ರಿಯ ಬುಡದಲ್ಲಿ ಹಳ್ಳಿಗಳು ಸಣ್ಣವು, ಸಮುದ್ರತೀರದಲ್ಲಿ ದೊಡ್ಡವು.

**ಜನರು.** ಒಟ್ಟು ಜನಸಂಖ್ಯದಲ್ಲಿ ಹಿಂದೂ ಜನರು ಶೇಕಡಾ ೮೫·೭, ೮·೧೬ ಕ್ರಿಸ್ತಿಗಳು, ೬·೦೯ ಮುಸಲ್ಮಾನರು. ಹಿಂದೂಗಳಲ್ಲಿ ಬ್ರಾಹ್ಮಣರು ೩೯೨೧, ಕೊಂಕಣಿಗರು ೬೧೪೯, ಪಡತಿಗಳು ೨೦೩೨, ಹಾಲ್ವಕ್ಕೀ ವೊಕ್ಕಲಿಗರು ೨೦೧೦, ಕುಣಬಿಗಳು ೧೫೮೫, ಸೋನಾರರು ೧೩೨೮, ಪಡಸಾಳಿಗಳು ೧೨೪೩, ಭಂಡಾರಿಗಳು ೫೪೩೬, ಕೊಮಾರ ಪೈಕರು ೪೦೩೭, ಕೋಳಿಗಳು (ಕಬ್ಬಲಿಗೇರು) ೧೩೦೭, ದೇವಳಿಗಳು ೧೩೭೬, ಬಾಂದಿಗಳು ೧೩೨೦, ಹೊಲಿಯರು ೩೦೪, ಇತ್ಯಾದಿ.

**ಅಂಕೋಲ ತಾಲೂಕು.**—**ಕ್ಷೇತ್ರ.** ಸಮುದ್ರತೀರದಲ್ಲಿ ಕಾರವಾಡ ತಾಲೂಕಿನ ದಕ್ಷಿಣಕ್ಕೆ. ಸರಕಾರೀ ಹಳ್ಳಿಗಳು ೯೦. ಕ್ಷೇತ್ರ ೩೬೭ ಚ. ಮೈಲು, ಜನಸಂಖ್ಯ ೩೪೧೮೯, ಭೂಮಿಯ ಕಂದಾಯ ೯೬೬೬೦ ರೂಪಾಯಿ.

**ಸ್ವರೂಪ, ಭೂಮಿ.** ಸಮುದ್ರತೀರವು ದಕ್ಷಿಣ ಮೇರೆಯಲ್ಲಿ ಗಂಗಾವಳಿಯ ವರಗ ೧೬ ಮೈಲು ಇರುವದು. ಈ ತಾಲೂಕಿನಲ್ಲಿ ವೊಂದೆರಡು ಸಣ್ಣ ವೊತ್ತು ಮಾತ್ರ ಸಮುದ್ರದಿಂದ ಭೂಮಿಯೊಳಗೆ ಬಂದಿರುತ್ತವೆ. ತೀರದಿಂದ ನಾಲ್ಕು ಐದು ಮೈಲಿನ ವರೆಗೆ ಪೂರ್ವಕ್ಕೆ ಬತ್ತದ ಗದ್ದೆಗಳೂ ಅಡಿಕೆ, ಮಾವು, ಹಲಸು, ಮುಂತಾದ ಫಲಗಳ ತೋಟಗಳೂ ಇರುತ್ತವೆ. ಅವುಗಳ ಪೂರ್ವಕ್ಕೆ ಸಣ್ಣ ಸಣ್ಣ ಗುಡ್ಡಗಳು ಆರಂಭವಾಗಿ, ಮುಂದ ಮುಂದಕ್ಕೆ ಹೋದ ಹಾಗೆ ಯೆತ್ತರವಾದ ಬೆಟ್ಟಗಳು ತಲೆದೊರುತ್ತವೆ. ಕೆಲವು ಕಡೆಯಲ್ಲಿ ಸಹ್ಯಾದ್ರಿಯಿಂದ ಗುಡ್ಡ ಸಾಲುಗಳು ಪಶ್ಚಿಮಕ್ಕೆ ಸಮುದ್ರದ ವರೆಗೆ ಹಬ್ಬಿರುವವು.

**ಹವೆ, ಮಳೆ, ನೀರು.** ಸಮುದ್ರತೀರದ ಹವೆಯು ಆರೋಗ್ಯದ್ದು, ಜ್ವರವಿಲ್ಲ. ಸಹ್ಯಾದ್ರಿಯ ಸಮೀಪದಲ್ಲಿ ಜ್ವರೋಪದ್ರವವಾಗುತ್ತದೆ. ಮಳೆಯು ಬಹುತರ ಕಾರವಾಡದ ಹಾಗೇ; ನೀರಿನ ಆಶ್ರಯವು ಸಮುದ್ರತೀರದಲ್ಲಿ ಬಾವಿಗಳು, ಬೇರೆ ಕಡೆಯಲ್ಲಿ ಸರುವುಗಳು. ನೀರಿಗೆ ಕೊರತೆ ಇಲ್ಲ.

**ಜನರು.** ಒಟ್ಟು ಜನಸಂಖ್ಯದಲ್ಲಿ ಹಿಂದೂ ಜನರು ಶೇಕಡಾ ೯೫·೮೮, ಮುಸಲ್ಮಾನರು ೩, ಕ್ರಿಸ್ತಿಗಳು ೧·೧೫. ಹಿಂದೂಗಳಲ್ಲಿ ಬ್ರಾಹ್ಮಣರು ೩೮೬೬, ಹಾಲ್ವಕ್ಕೀ ವೊಕ್ಕಲಿಗರು ೮೨೧, ನಾಡೋರು ೧೫೫೩, ಕುಣಬಿಗಳು ೧೨೧೮, ಕರೆ ವೊಕ್ಕಲಿಗರು ೧೧೦೧, ಸೋನಾರರು ೧೫೨೧, ಕೊಮಾರ ಪೈಕರು ೨೩೦೭, ಹಳೆ ಪೈಕರು ೧೯೪೯, ಆಗೇರು ೧೫೦೨, ಇತ್ಯಾದಿ.

**ಕ್ಷೇತ್ರ.**

ಕುಮಟಾ ತಾಲೂಕು.—ಸಮುದ್ರ ದಂಡೆಯಲ್ಲಿ ಅಂಕೋಲಾ ತಾಲೂಕಿನ ದಕ್ಷಿಣಕ್ಕೆ. ಸರಕಾರೀ ಹಳ್ಳಿಗಳು ೧೨೦. ಕ್ಷೇತ್ರ ೨೩೦ ಚ. ಮೈಲು, ಜನಸಂಖ್ಯೆ ೫೮೫೭೮, ಭೂಮಿಯ ಕಂದಾಯ ೧೨೧೨೦ ರೂಪಾಯಿ.

**ಸ್ವರೂಪ, ಭೂಮಿ.**

ಎತ್ತರವಾದ ತಪ್ಪಲ ಭೂಮಿಗಳೂ ಗುಡ್ಡಗಳೂ ಸಮುದ್ರ ದಂಡೆಯ ವರೆಗೆ ಹಬ್ಬಿರುತ್ತವೆ; ವೊತ್ತುಗಳೂ ಕೆಲವುಂಟು. ಆದರೆ ಸಮುದ್ರ ದಂಡೆಯಲ್ಲಿ ತೆಂಗಿನ ಬನಗಳೂ ಅವುಗಳ ಹಿಂದೆ ಬತ್ತದ ಗದ್ದೆಗಳೂ, ಮಧ್ಯ ಪ್ರದೇಶದಲ್ಲಿ ಹಲಕೆಲವು ತೋಟಗಳೂ ಉಂಟು. ತಾಲೂಕಿನ ಮಧ್ಯದಲ್ಲಿ ಸಹ ಕಿರಿ ಅಡವಿಯನ್ನು ಕಾಣ ಬಹುದು; ಅದು ಪೂರ್ವಕ್ಕೆ ಹೋದ ಹಾಗೆ ದಟ್ಟಾಗಿಯೂ ಯೆತ್ತರವಾಗಿಯೂ ಬೆಳಿದದ್ದು ಕಾಣಿಸುವದು. ಸಹ್ಯಾದ್ರಿಯ ಬುಡದಲ್ಲಿ ರಾಗಿಯ ಭೂಮಿಗಳು ವಿಶೇಷ. ಭೂಮಿ ಕೆಂಪು; ಸಮುದ್ರದ ಬಳಿಯಲ್ಲಿ ಉಸುಬು ಕೂಡಿದ್ದು.

**ಹವೆ, ಮಳೆ, ನೀರು.**

ಸಮುದ್ರ ದಂಡೆಯ ಹವೆಯು ಆರೋಗ್ಯದ್ದು. ಚಳಿಗಾಲದಲ್ಲಿ ಚಳಿ ಇಲ್ಲ; ಅದಕ್ಕೆ ಬದಲಾಗಿ ಪ್ರತಿ ದಿವಸ ಸಾಯಂಕಾಲಕ್ಕೆ ಸಮುದ್ರದ ಮೇಲಿಂದ ತಂಗಾಳಿ ಬರುತ್ತದೆ. ಆದರೆ ಪೂರ್ವ ಭಾಗದಲ್ಲಿ ಅಡವಿಯ ನೆರೆಯಲ್ಲಿ ಚಳಿ ಜ್ವರದ ಉಪದ್ರವಾಗುತ್ತದೆ. ಕುಮಟೆಯಲ್ಲಿ ಮಳೆಯು ೯೬ ಇಂಚಿನಿಂದ ೨೦೧ ಇಂಚಿನ ವರೆಗೆ, ಸರಾಸರೀ ೧೩೨ ಇಂಚು. ನೀರಿಗೆ ಕೊರತೆ ಇಲ್ಲ.. ಸಮುದ್ರ ದಂಡೆಯ ಬಾವಿಗಳು ಬಹಳ ಆರೋಗ್ಯಕರ; ಒಳ ಶೀಮೆಯಲ್ಲಿ ಬಾವಿಯ ನೀರು ಶೀತ, ಸರುವುಗಳ ನೀರು ಸೌಳು.

**ಜನರು.**

ಒಟ್ಟು ಜನಸಂಖ್ಯೆದಲ್ಲಿ ಶೇಕಡಾ ೯೩·೭೭ ಹಿಂದೂ ಜನರು, ೩·೫೭ ಮುಸಲ್ಮಾನರು, ೨·೬೦ ಕ್ರಿಸ್ತಿಗಳು. ಹಿಂದೂ ಜನರಲ್ಲಿ ಬ್ರಾಹ್ಮಣರು ೧೧೩೨೭, ಹಾಲ್ವಕ್ಕೀ ವೊಕ್ಕಲಿಗರು ೮೯೮೩, ಗಾವವೊಕ್ಕಲಿಗರು ೫೧೪೦, ನಾಡೋರು ೧೬೫೪, ಸೋನಾರು ೧೯೨೮, ಹಳೆ ಪೈಕರು ೬೭೮೬, ಭಂಡಾರಿಗಳು ೧೯೬೩, ಹರ್ಕಾಂತರು ೧೭೧೨, ಬಂದಿಗಳು ೧೦೬೬, ಮುಕ್ರಿಗಳು ೨೮೮, ಇತ್ಯಾದಿ.

**ಕ್ಷೇತ್ರ.**

ಹೊನ್ನಾವರ ತಾಲೂಕು.—ಸಮುದ್ರತೀರದಲ್ಲಿ ಜಿಲ್ಲೆಯ ದಕ್ಷಿಣ ಭಾಗದಲ್ಲಿ ಕುಮಟಾ ತಾಲೂಕಿನ ದಕ್ಷಿಣಕ್ಕೆ. ಸರಕಾರೀ ಹಳ್ಳಿಗಳು ೧೪೦. ಕ್ಷೇತ್ರ ೪೪೬ ಚ. ಮೈಲು, ಜನಸಂಖ್ಯೆ ೮೫೬೨೫, ಭೂಮಿಯ ಕಂದಾಯ ೧೫೯೭೨೦ ರೂಪಾಯಿ.

**ಸ್ವರೂಪ, ಭೂಮಿ.**

ಭೂಮಿಯ ಸ್ವರೂಪವು ಹೆಚ್ಚು ಕಡಿಮೆ ಕುಮಟಾ ತಾಲೂಕಿನಂತೆ ಇರುತ್ತದೆ. ಗೆರಸಪ್ಪೆಯ ಹೊಳೆಯ ದಂಡೆಯಲ್ಲಿ ಬೆಳೆಯುಳ್ಳ ಬತ್ತದ ಭೂಮಿಯುಂಟು; ಶೀ ನೀರಿನ ಸರುವುಗಳು ಸರ್ವ ಕಾಲವೂ ಹರಿಯುತ್ತಿರುತ್ತವೆ. ಸಮುದ್ರ ದಂಡೆಯ ಗ್ರಾಮಗಳ ಭೂಮಿ ಉಸುಬು ಕೂಡಿದ ಕೆಂಪು ಮಣ್ಣಿನದು. ವಾಡಿಕೆಯಾಗಿ ಗುಡ್ಡಗಳ ನೆರೆಯಲ್ಲಿ ಭೂಮಿ ಕೆಂಪು, ಸರುವುಗಳ ನೆರೆಯಲ್ಲಿ ಕಪ್ಪು.

ಸಮುದ್ರ ದಂಡೆಯಲ್ಲಿ ಹೊನ್ನಾವರದ ಹವೆಯು ಯೆಲ್ಲಕ್ಕೂ ಮೇಲಾದದ್ದು. ಸಹ್ಯಾದ್ರಿಯ ಸಮೀಪದಲ್ಲಿ ಚಳಿಜ್ವರದ ಉಪದ್ರವವಾಗುತ್ತದೆ. ಹೊನ್ನಾವರದಲ್ಲಿ ಮಳೆ ೯೧ ಇಂಚಿನಿಂದ ೧೮೪ ಇಂಚಿನ ವರೆಗೆ, ಸರಾಸರೀ ೧೪೦ ಇಂಚು. ಶರಾವತಿಯು ನಾಲ್ಕು ಯೆಸಳುಗಳಾಗಿ ಗೆರಸಪ್ಪೆಯ ಬಳಿಯಲ್ಲಿ ೮೩೦ ಫೂಟಿನ ಯೆತ್ತರದಿಂದ ಕೆಳಗೆ ಬೀಳುತ್ತದೆ. (ಈ ತಡಸಲಿನ ವರ್ಣನೆಯನ್ನು ಮುಂದಿನ ಭಾಗದಲ್ಲಿ ನೋಡು). ಘಟ್ಟದ ಕೆಳಗಿನ ಬೇರೆ ತಾಲೂಕುಗಳಂತೆ ಈ ತಾಲೂಕಿನಲ್ಲಿಯೂ ನೀರಿಗೆ ಕೊರತೆ ಇಲ್ಲ.

**ಹವೆ, ಮಳೆ, ನೀರು.**

ಒಟ್ಟು ಜನಸಂಖ್ಯೆದಲ್ಲಿ ಶೇಕಡಾ ೮೬·೯೨ ಹಿಂದೂ ಜನರು, ೮·೬೯ ಮುಸಲ್ಮಾನರು, ೪·೩೮ ಕ್ರಿಸ್ತಿಗಳು. ಹಿಂದೂ ಜನರಲ್ಲಿ ಬ್ರಾಹ್ಮಣರು ೧೩೦೦೦, ಆರೇರು ೪೨೮೬, ಗಾವ ವೊಕ್ಕಲಿಗರು ೩೮೫೫, ಹಾಲ್ವಕ್ಕೀ ವೊಕ್ಕಲಿಗರು ೩೩೩೯, ಸೂದಿರರು ೨೪೨೭, ಸೋನಾರರು ೧೯೭೩, ಹಳೆಪೈಕರು ೧೮೪೨೦, ಕೊಮಾರ ಪೈಕರು ೨೦೩೪, ಸಪ್ಪಳಿಗರು ೨೫೩೧, ಮುಕ್ರಿಗಳು ೧೮೬೭, ಹೊಲಿಯರು ೨೫೭, ಇತ್ಯಾದಿ.

**ಜನರು.**

ಸುಪಾ ತಾಲೂಕು.—ಘಟ್ಟದ ಮೇಲೆ ಜಿಲ್ಲೆಯ ಉತ್ತರದಲ್ಲಿ ಖಾನಾಪುರ ಧಾರವಾಡ ತಾಲೂಕುಗಳ ದಕ್ಷಿಣಕ್ಕೆ. ಸರಕಾರೀ ಹಳ್ಳಿಗಳು ೨೬೯. ಕ್ಷೇತ್ರ ೯೭೯ ಚ. ಮೈಲು, ಜನಸಂಖ್ಯೆ ೬೧೧೫೪, ಭೂಮಿಯ ಕಂದಾಯ ೧೦೬೬೯೦ ರೂಪಾಯಿ.

**ಕ್ಷೇತ್ರ.**

ಪೂರ್ವ ಉತ್ತರ ಭಾಗಗಳು ಬೈಲು; ಬೇರೆ ಕಡೆಯಲ್ಲೆಲ್ಲ ಗುಡ್ಡಗಳೂ ಅಡವಿಯೂ ಉಂಟು. ಎಲ್ಲ ಕಡೆಯಲ್ಲಿ ಭೂಮಿಯು ತಗ್ಗು ದಿನ್ನೆಯಾದದ್ದು, ಗುಡ್ಡಗಳುಳ್ಳದ್ದು. ಅಡವಿಯೊಳಗಿಂದ ಕಾಳೀ ನದಿಯೂ ಅದರ ಶಾಖೆಗಳೂ ಹರಿಯುತ್ತವೆ. ಆರೇರು ಕುಮ್ರಿ ಪೈರು ಬಹಳ ಕಡೆಯಲ್ಲಿ ಮಾಡುತ್ತಾರೆ. ಉತ್ತರ ಪೂರ್ವ ಭಾಗಗಳಲ್ಲಿ ಯೆರೆ ನೆಲವುಂಟು; ಪಶ್ಚಿಮ ದಕ್ಷಿಣ ಭಾಗಗಳಲ್ಲಿ ಕೆಂಪು, ಬಿಳಿ ಕಟಕದ ಭೂಮಿ.

**ಸ್ವರೂಪ, ಭೂಮಿ.**

ಹವೆಯು ಬಹಳ ಶೈತ್ಯ, ಜ್ವರದ ತವರ ಮನೆ. ಬೇಸಿಗೆಯಲ್ಲಿ ಸಹ ಬಿಸಿಲು ವೊಳಿತಾಗಿ ಕಾಯುವದಿಲ್ಲ. ಹಲ್ಯಾಳದಲ್ಲಿ ಮಳೆ ೨೯ರಿಂದ ೮೨ ಇಂಚಿನ ವರೆಗೆ, ಸರಾಸರೀ ೪೭ ಇಂಚು. ಸರುವುಗಳ ನೀರಿಗೆ ಕೊರತೆ ಇಲ್ಲ. ಆದರೆ ಯೆಲೆ ಮುಂತಾದ ಉದ್ಭಿಜ್ಜ ಪದಾರ್ಥಗಳು ಆ ನೀರೊಳಗೆ ಯಾವಾಗಲೂ ಕೊಳಿಯುತ್ತಿರುವ ಕಾರಣ ನೀರು ರೋಗಕಾರಕವಾಗಿದೆ.

**ಹವೆ, ಮಳೆ, ನೀರು.**

ಒಟ್ಟು ಜನಸಂಖ್ಯೆದಲ್ಲಿ ಹಿಂದೂ ಜನರು ಶೇಕಡಾ ೮೯·೨೦, ಮುಸಲ್ಮಾನರು ೬·೩೧, ಕ್ರಿಸ್ತಿಗಳು ೪·೪೭. ಹಿಂದೂ ಜನರಲ್ಲಿ ಬ್ರಾಹ್ಮಣರು ೧೯೬೭, ಲಿಂಗವಂತರು ೭೪೫೨, ಕುಣಬಿಗಳು ೮೯೧೮, ಹಾಲ್ವಕ್ಕೀ ವೊಕ್ಕಲಿಗರು ೧೨೪೦, ಹೊಲಿಯರು ೧೬೩೮, ಇತ್ಯಾದಿ.

**ಜನರು.**

**ಕ್ಷೇತ್ರ.** ಯಲ್ಲಾಪುರ ತಾಲೂಕು.—ಘಟ್ಟದ ಮೇಲೆ ಸುಪಾ ತಾಲೂಕಿನ ದಕ್ಷಿಣಕ್ಕೆ. ಹಳ್ಳಿಗಳು ೧೭೪. ಕ್ಷೇತ್ರ ೫೪೯ ಚ. ಮೈಲು, ಜನಸಂಖ್ಯೆ ೩೬೩೧೪, ಭೂಮಿಯ ಕಂದಾಯ ೯೫೫೯೦ ರೂಪಾಯಿ.

**ಸ್ವರೂಪ, ಭೂಮಿ.** ಪೂರ್ವ ಭಾಗದಲ್ಲಿಯೂ ಮುಂಡಗೋಡ ಮಹಾಲಿನಲ್ಲಿಯೂ ಬೈಲು ಪ್ರದೇಶವಿರುತ್ತದೆ. ಆದರೆ ವಾಡಿಕೆಯಾಗಿ ಈ ತಾಲೂಕಿನಲ್ಲಿ ಅಡವಿಯೇ ಬಹಳ. ಪಶ್ಚಿಮ ಭಾಗದ ನಿಬಿಡವಾದ ಅಡವಿಯಲ್ಲಿ ಹರಿಯುವ ಸುರುವುಗಳ ಯೆಡಬಲದಲ್ಲಿ ಬತ್ತದ ಗದ್ದೆಗಳೂ ಅಡಿಕೆ ತೆಂಗುಗಳ ತೋಟಗಳೂ ಇರುತ್ತವೆ. ದಕ್ಷಿಣದಲ್ಲಿ ಅಡಿಕೆಯ ತೋಟಗಳು ಬಹಳ. ಮುಂಡಗೋಡ ಮಹಾಲಿನ ಭೂಮಿ ಯೆರೆಯಂಥಾದು; ಅದರಲ್ಲಿ ಬತ್ತ, ಕಬ್ಬು, ಬೆಳೆಯುತ್ತವೆ. ಪಶ್ಚಿಮದ ಭೂಮಿಯೆಲ್ಲ ಕೆಂಪು.

**ಹವೆ, ಮಳೆ, ನೀರು.** ಹವೆಯು ಸುಪಾ ತಾಲೂಕಿನಂತೆ; ಜನರ ವಸ್ತಿಯು ಅಲ್ಲಿಗಿಂತ ಕಡಿಮೆ. ಮುಂಡಗೋಡ ಮಾಹಾಲಿನ ಹವೆಯು ಬೇಸಿಗೆಯಲ್ಲಿ ಸ್ವಲ್ಪ ಆರೋಗ್ಯದ್ದಿರುತ್ತದೆ. ಯೆಲ್ಲಾಪುರದಲ್ಲಿ ಮಳೆ ೬೭ರಿಂದ ೧೩೯ ಇಂಚಿನ ವರೆಗೆ, ಸರಾಸರೀ ೯೦ ಇಂಚು. ಬೆಡತೀ ಹಳ್ಳ, ಕಾಳೀ ನದಿ, ಮುಖ್ಯ ಜಲಾಶಯಗಳು; ಒಟ್ಟಿಗೆ ನೀರಿನ ಸಮೃದ್ಧಿಯುಂಟು; ಆದರೆ ಅದು ಸುಪಾ ತಾಲೂಕಿನಂತೆ ರೋಗಕಾರಕ.

**ಜನರು.** ಒಟ್ಟು ಜನಸಂಖ್ಯೆದಲ್ಲಿ ಹಿಂದೂ ಜನರು ಶೇಕಡಾ ೮೬·೮೬, ಮುಸಲ್ಮಾನರು ೯·೪೮, ಕ್ರಿಸ್ತಿಗಳು ೩·೬೪. ಹಿಂದೂ ಜನರಲ್ಲಿ ಬ್ರಾಹ್ಮಣರು ೬೨೦, ಆರೇರು ೪೮೩೧, ಕುಣಬಿಗಳು ೨೩೦೫, ಕರೆ ವೊಕ್ಕಲಿಗರು ೧೨೩೮, ಲಿಂಗವಂತರು ೧೨೩೪, ವೊಡ್ಡರು ೧೫೦೪, ಇತ್ಯಾದಿ.

**ಕ್ಷೇತ್ರ.** ಸಿರಸೀ ತಾಲೂಕು.—ಘಟ್ಟದ ಮೇಲೆ ಮಧ್ಯ ಭಾಗದಲ್ಲಿ ಯೆಲ್ಲಾಪುರ ತಾಲೂಕಿನ ದಕ್ಷಿಣಕ್ಕೆ. ಹಳ್ಳಿಗಳು ೨೯೯. ಕ್ಷೇತ್ರ ೭೭೯ ಚ. ಮೈಲು, ಜನಸಂಖ್ಯೆ ೬೨೪೦೦, ಭೂಮಿಯ ಕಂದಾಯ ೧೭೧೭೬೦ ರೂಪಾಯಿ.

**ಸ್ವರೂಪ, ಭೂಮಿ.** ಪೂರ್ವ ಭಾಗದಲ್ಲಿ ಗುಡ್ಡಗಳು ಕಡಿಮೆ; ಪಶ್ಚಿಮ ಭಾಗದಲ್ಲಿ ಸಹ್ಯಾದ್ರಿಯ ಕಡೆಗೆ ಗುಡ್ಡಗಳೂ ತಪ್ಪಲ ಭೂಮಿಗಳೂ ಹೆಚ್ಚಾಗುತ್ತ ಹೋಗುತ್ತವೆ. ಆದರೆ ಅಡವಿ ಕಡಿಮೆ; ಸಹ್ಯಾದ್ರಿಯ ಬುಡದಲ್ಲಿ ಸಹ ಕೊಳ್ಳಗಳಲ್ಲಿ ಬಹು ಬೆಳೆಯುಳ್ಳ ಭೂಮಿಯನ್ನೂ, ಅದರಲ್ಲಿ ಅಡಿಕೆ ಯಾಲಕ್ಕಿ ಮುಂತಾದವುಗಳ ತೋಟಗಳನ್ನೂ ಗದ್ದೆಗಳನ್ನೂ ಕಾಣ ಬಹುದು. ಪೂರ್ವ ಭಾಗದ ಭೂಮಿ ವಾಡಿಕೆಯಾಗಿ ಯೆರೆ; ಪಶ್ಚಿಮದಲ್ಲಿ ಯೆತ್ತರದಲ್ಲಿ ಕೆಂಪು ಭೂಮಿ, ತಗ್ಗುಗಳಲ್ಲಿ ಕರೆ ಭೂಮಿ.

ಬೇಸಿಗೆಯಲ್ಲಿ ಹವೆಯು ಆರೋಗ್ಯದ್ದಿರುತ್ತದೆ; ಆದರೆ ಚಳಿಗಾಲದಲ್ಲಿ ರೋಗಕಾರಕ, ಜ್ವರೋಪದ್ರವ ಬಹಳ. ಮಳೆಯು ಪೂರ್ವಕ್ಕಿಂತ ಪಶ್ಚಿಮದಲ್ಲಿ ಹೆಚ್ಚು; ಶಿರಸಿಯಲ್ಲಿ ೬೪ರಿಂದ ೧೧೦ ಇಂಚಿನ ವರೆಗೆ, ಸರಾಸರೀ ೮೩ ಇಂಚು. ವರದಾ ನದಿಯು ಈ

ತಾಲೂಕಿನೊಳಗಿಂದ ಹರಿಯುತ್ತದೆ; ತದಡಿ ಯೆಂಬ ಹೊಳೆಯು ಇದೇ ತಾಲೂಕಿನಲ್ಲಿ **ಹವೆ, ಮಳೆ, ನೀರು.** ಹುಟ್ಟಿ ಪಶ್ಚಿಮಕ್ಕೆ ಹರಿಯುತ್ತದೆ. ಇವಲ್ಲದೆ ಹನ್ನೆರಡು ತಿಂಗಳೂ ಹರಿಯುವ ಸರುವುಗಳು ಹಲವುಂಟು. ಹಳ್ಳಿಗಳಿಗೆ ಕೆರೆಗಳೂ ಬಾವಿಗಳೂ ಇರುತ್ತವೆ. ಒಟ್ಟಿಗೆ ನೀರಿನ ಸಮೃದ್ಧಿಯುಂಟು.

ಒಟ್ಟು ಜನಸಂಖ್ಯೆದಲ್ಲಿ ಹಿಂದೂ ಜನರು ಶೇಕಡಾ ೯೪·೪೯, ಮುಸಲ್ಮಾನರು ೪·೨೯, ಕ್ರಿಸ್ತಿಗಳು ೧·೨೧. ಹಿಂದೂ ಜನರಲ್ಲಿ ಬ್ರಾಹ್ಮಣರು ೧೫೮೯೦, ಮಲ್ಲವರು ೧೨೦೩, ಲಿಂಗ **ಜನರು.** ವಂತರು ೧೦೮೮, ಬಣಜಿಗರು ೧೦೫೦, ಆರೇರು ೩೮೧೩, ಕರೆವೊಕ್ಕಲಿಗರು ೩೮೪೨, ಕುಣಬಿಗಳು ೧೫೧೭, ಸೋನಾರರು ೧೨೨೨, ಹಳೆಪೈಕರು ೮೮೪೫, ಅಗಸರು ೧೬೯೭, ಹೊಲಿಯರು ೩೫೭೮, ಚಲವಾದಿಗಳು ೧೦೭೮, ಇತ್ಯಾದಿ.

ಸಿದ್ದಾಪುರ ತಾಲೂಕು.— ಘಟ್ಟದ ಮೇಲೆ ಜಿಲ್ಲೆಯ ದಕ್ಷಿಣ ಭಾಗ, ಶಿರಶೀ **ಕ್ಷೇತ್ರ.** ತಾಲೂಕಿನ ದಕ್ಷಿಣಕ್ಕೆ. ಹಳ್ಳಿಗಳು ೯೫. ಕ್ಷೇತ್ರ ೨೪೯ ಚ. ಮೈಲು, ಜನಸಂಖ್ಯೆ ೩೫೬೫೮, ಭೂಮಿಯ ಕಂದಾಯ ೯೦೫೪೦ ರೂಪಾಯಿ.

**ಸ್ವರೂಪ, ಭೂಮಿ.** ಭೂಮಿಯ ಸ್ವರೂಪವು ವಾಡಿಕೆಯಾಗಿ ಶಿರಸಿಯಂತೆ. ತಗ್ಗು ಪ್ರದೇಶಗಳಲ್ಲಿ ಹೊರ್ತಾಗಿ ಭೂಮಿಯು ಯೆಲ್ಲ ಕಡೆಯಲ್ಲಿ ಕೆಂಪು. ಸರುವುಗಳು ಕಡೆಗೇ ಹರಿಯುತ್ತಿರುತ್ತವೆ.

ಬೇಸಿಗೆಯಲ್ಲಿ ಹವೆಯು ತಕ್ಕಮಟ್ಟಿಗೆ ಆರೋಗ್ಯದ್ದಿರುತ್ತದೆ. ಮಳೆಗಾಲ ಚಳಿಗಾಲಗಳಲ್ಲಿ ಮುಖ್ಯವಾಗಿ ಪಶ್ಚಿಮ ಭಾಗದಲ್ಲಿ ಚಳಿಜ್ವರ ಬಹಳ. ಸಿದ್ದಾಪುರದಲ್ಲಿ ಮಳೆ ೭೩ರಿಂದ ೧೧೬ ಇಂಚಿನ ವರೆಗೆ, ಸರಾಸರೀ ೯೫ ಇಂಚು. ಶರಾವತಿಯೂ ಅದಕ್ಕೆ ಕೂಡುವ ನಾಲ್ಕು ದೊಡ್ಡ ಸರುವುಗಳೂ ಯಾವಾಗಲೂ ಹರಿಯುತ್ತಿರುತ್ತವೆ. ಇವಲ್ಲದೆ ಹೇಮಗಣಿ ಅಥವಾ ತದಡಿ, ವರದಾ, ಯೆಂಬ ಹೊಳೆಗಳೂ ಅವುಗಳ ಶಾಖೆಗಳೂ ಈ ತಾಲೂಕಿನಲ್ಲಿ ಹರಿಯುತ್ತವೆ. ಒಟ್ಟಿಗೆ ನೀರಿನ ಕೊರತೆ ಇಲ್ಲ.

ಒಟ್ಟು ಜನಸಂಖ್ಯೆದಲ್ಲಿ ಹಿಂದೂ ಜನರು ಶೇಕಡಾ ೯೭·೩೩, ಮುಸಲ್ಮಾನರು ೨·೩೨. ಹಿಂದೂ ಜನರಲ್ಲಿ ಬ್ರಾಹ್ಮಣರು ೯೨೬೦, ಕರೇ ವೊಕ್ಕಲಿಗರು ೨೪೯೫, ಕೋಟ ವೊಕ್ಕಲಿಗರು ೧೩೮೦, ಹಳೆಪೈಕರು ೭೨೩೩, ಅಗಸರು ೨೮೮೫, ಹೊಲಿಯರು ೨೮೭೯, ಇತ್ಯಾದಿ. ಬ್ರಾಹ್ಮಣರೂ ಹಳೆಪೈಕರೂ ಕೂಡಿ ಅರ್ಧಾ ಜನಸಂಖ್ಯೆವಾಗುತ್ತದೆ. ಹಿಂದೂ ಜನರ ಪ್ರಮಾಣವು ಈ ತಾಲೂಕಿನಲ್ಲಿ ಇದ್ದಷ್ಟು ನಾಲ್ಕೂ ಜಿಲ್ಲೆಗಳಲ್ಲಿ ಯಾವ ತಾಲೂಕಿನಲ್ಲಿಯೂ ಇಲ್ಲ, ಅಂದರೆ ಮುಸಲ್ಮಾನರ ಪ್ರಮಾಣವು ಈ ತಾಲೂಕಿನಲ್ಲಿ ಯೆಲ್ಲಕ್ಕೂ ಕಡಿಮೆ ಇರುತ್ತದೆ.